


# ಜನತಾವಾಣಿ




ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಅತ್ಯಧಿಕ ಪ್ರಸಾರವುಳ್ಳ ಮಧ್ಯ ಕರ್ನಾಟಕದ ಏಕೈಕ ಪತ್ರಿಕೆ

ವೆಬ್ ಸೈಟ್ : www.janatavani.com ಸಂಪಾದಕರು : ಹೆಚ್.ಎನ್.ಷಡಾಕ್ಷರಪ್ಪ ಸಹ ಸಂಪಾದಕರು : ಎಂ.ಎಸ್.ವಿಕಾಸ್ ಈ ಮೇಲ್ : janathavani@mac.com

ಸಂಪುಟ : 37 ಸಂಚಿಕೆ : 274 ನೋಂದಣಿ ಸಂಖ್ಯೆ : 27369/75 ಕೆಎಎಸ್‌ಕೆಸಿಟಿಎಲ್ : 275/2009-11 ಮಂಗಳವಾರ ಫೆಬ್ರವರಿ 15, 2011 ದಾವಣಗೆರೆ ದೂರವಾಣಿ : 254736, 231016 ಫ್ಯಾಕ್ಸ್ : 254609 ಪುಟ : 4 ರೂ : 2-00

## ನಂದಿನಿ ಹಾಲಿನ ದರ 2 ರೂ. ಹೆಚ್ಚಳ

ಬೆಂಗಳೂರು, ಫೆ. 14 - ಮಧ್ಯರಾತ್ರಿಯಿಂದಲೇ ನಂದಿನಿ ಹಾಲಿನ ಮಾರಾಟ ದರ ಪ್ರತಿ ಲೀಟರ್‌ಗೆ ಎರಡು ರೂ. ಹೆಚ್ಚಳವಾಗಲಿದೆ.

ಹಾಲಿನ ಜತೆಗೆ ಮೊಸರು ಸೇರಿದಂತೆ ಇತರೆ ಉತ್ಪನ್ನಗಳ ಬೆಲೆಯೂ ಗಣನೀಯವಾಗಿ ಏರಿಕೆಯಾಗಿವೆ ಎಂದು ಕೆಎಂಎಫ್ ಅಧ್ಯಕ್ಷ ಸೋಮಶೇಖರ್ ರೆಡ್ಡಿ ಇಂದಿಲ್ಲಿ ಪ್ರಕಟಿಸಿದ್ದಾರೆ.

ಸಾಮಾನ್ಯ ಹಾಲಿನ ದರ 19-21ರೂಗೆ ಏರಿಕೆ, ಹಸಿರು ಬಣ್ಣದ ಪ್ಯಾಕೇಟ್‌ನ ಹಾಲು 20-22ರು. ಕೆಂಪು ಪ್ಯಾಕೇಟ್‌ನ ಹಾಲು 24-26 ರೂ.ಗೆ ಹೆಚ್ಚಲಿದೆ. ಅದೇ ರೀತಿ ಮೊಸರು ದರ 24-26 ರೂಗೆ ಹೆಚ್ಚಳವಾಗಿದೆ.

ಹೆಚ್ಚಿಸಿರುವ ಎರಡು ರೂ. ಹಾಲಿನ ದರವನ್ನು ನೇರವಾಗಿ ರೈತರಿಗೆ ನೀಡುವುದಾಗಿ ತಿಳಿಸಿದ್ದಾರೆ.

ಪಶು ಆಹಾರ ಸೇರಿದಂತೆ ಇತರೆ ಆಹಾರಗಳ ಬೆಲೆ ಏರಿಕೆಯಾಗಿ ರೈತರಿಗೆ ಉಂಟಾಗುವ ನಷ್ಟ ತಪ್ಪಿಸಲು ಹಾಲಿನ ದರ ಪರಿಷ್ಕರಿಸಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಬಿ.ಎಸ್.ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಎರಡನೇ ಬಾರಿಗೆ ಹಾಲಿನ ದರ ಏರಿಕೆ ಮಾಡಲಾಗಿದೆ.

ನೆರೆ ರಾಜ್ಯಗಳಲ್ಲಿ ಇಲ್ಲಿಗಿಂತ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ರೈತರು ಹಾಲು ಒಕ್ಕೂಟಕ್ಕೆ ಬದಲಾಗಿ ನೆರೆ ರಾಜ್ಯಗಳಿಗೆ ಮಾರಾಟ ಮಾಡುತ್ತಿದ್ದರು.

ಇದರಿಂದ ರಾಜ್ಯದ ಹಾಲಿನ ಸಂಗ್ರಹದಲ್ಲಿ ಇಳಿಕೆಯಾಗುತ್ತಿದೆ. ನೆರೆ ರಾಜ್ಯಕ್ಕೆ ಕಳುಹಿಸುವ ಹಾಲು

(4ನೇ ಪುಟಕ್ಕೆ)

### ಶಿವಮೊಗ್ಗ ಒಕ್ಕೂಟದ ಪರಿಷ್ಕೃತ ದರಗಳು

ಶಿವಮೊಗ್ಗ ಹಾಲು ಒಕ್ಕೂಟವು ನಂದಿನಿ ಹಾಲಿನ ದರವನ್ನು ಏರಿಕೆ ಮಾಡಿದ್ದು, ದಿನಾಂಕ 15ರ ಬೆಳಿಗ್ಗೆಯಿಂದಲೇ ಅನ್ವಯವಾಗುವಂತೆ ಪ್ರತಿ ಲೀಟರ್‌ಹಾಲಿಗೆ ಪ್ರಸ್ತುತ ಇರುವ ಮಾರಾಟ ದರಕ್ಕಿಂತ 2 ರೂ. ಹೆಚ್ಚಿಸಿ ಪರಿಷ್ಕರಿಸಲಾಗಿದೆ.

ಪರಿಷ್ಕರಣೆಗೊಂಡಿರುವ ಹೆಚ್ಚುವರಿ 2 ರೂ.ಗಳನ್ನು ಹಾಲು ಉತ್ಪಾದಕರಿಗೆ ನೀಡಲಾಗುವುದು. ಇದರಿಂದ ಹಾಲು ಶೇಖರಣೆಯ ಪ್ರಸ್ತುತ ದರವನ್ನು 15.20 ರಿಂದ ರೂ. 17.20ಕ್ಕೆ ಹೆಚ್ಚಿಸಲಾಗಿದೆ.

ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ನಂದಿನಿ ಹಾಲಿನ ಪರಿಷ್ಕೃತಗೊಂಡಿರುವ ಪಟ್ಟಿ

ಪ್ರತಿ ಲೀಟರ್ ಟೋನ್ಡ್ ಹಾಲು ರೂ. 21/-, ಶುಭಂ ಹಾಲು ರೂ. 24/-, ಹೋಮೋಜಿನೈಸ್ಡ್ ಶುಭಂ ಹಾಲು-ರೂ. 25, ಹೋಮೋಜಿನೈಸ್ಡ್ ಹಾಲು (250 ಮಿ. ಪ್ಯಾಕೇಟ್‌ಗೆ) ರೂ. 6.50, ಮೊಸರು (500 ಗ್ರಾಂ. ಪ್ಯಾಕೇಟ್‌ಗೆ) ರೂ. 13, ಮೊಸರು (200 ಗ್ರಾಂ. ಪ್ಯಾಕೇಟಿಗೆ) ರೂ. 6.50, ಮಜ್ಜಿಗೆ (200 ಮಿ. ಪ್ಯಾಕೇಟಿಗೆ) ರೂ. 6 ಪರಿಷ್ಕೃತವಾಗಿದೆ.

ಪರಿಷ್ಕೃತಗೊಂಡ ದರಗಳನ್ನು ಮುದ್ರಿತಗೊಂಡ ಪಾಲಿಥಿನ್ ಫಿಲ್ಮ್ ಒಕ್ಕೂಟಕ್ಕೆ ಪೂರೈಕೆಯಾಗುವವರೆಗೂ ಹಳೆಯ ದರ ಮುದ್ರಿತವಾಗಿರುವ ಪಾಲಿಥಿನ್ ಫಿಲ್ಮ್‌ನಲ್ಲೇ ಹಾಲನ್ನು ಪ್ಯಾಕ್ ಮಾಡಲಾಗುವುದು ಎಂದು ಒಕ್ಕೂಟದ ಅಧ್ಯಕ್ಷ ಡಿ.ಜಿ. ಷಣ್ಮುಖ ಪಾಟೀಲ್ ತಿಳಿಸಿದ್ದಾರೆ.

## ಪಕ್ಷೇತರ ಶಾಸಕರ ಅನರ್ಹತೆ ಸರಿ

### ಸಭಾಧ್ಯಕ್ಷರು ಯಾವುದೇ ದುರುದ್ದೇಶದಿಂದ ಈ ಸದಸ್ಯರನ್ನು ಅನರ್ಹಗೊಳಿಸಿಲ್ಲ : ಹೈಕೋರ್ಟ್

ಬೆಂಗಳೂರು, ಫೆ. 14 - ರಾಜ್ಯ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿರುವ ಐವರು ಪಕ್ಷೇತರ ಅನರ್ಹ ಶಾಸಕರ ಕುರಿತು ಹೈಕೋರ್ಟ್ ಇಂದು ಅಂತಿಮ ತೀರ್ಪು ಪ್ರಕಟಿಸಿದ್ದು ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಅವರ ಕ್ರಮವನ್ನು ಎತ್ತಿಹಿಡಿಯುವುದರ ಮೂಲಕ ಪಕ್ಷೇತರ ಶಾಸಕರ ಅನರ್ಹತೆ ಸರಿ ಎಂದಿದೆ.

ಮಹತ್ವದ ಆದೇಶ ನೀಡುವ ಮೂಲಕ ಪಕ್ಷೇತರ ಶಾಸಕರಾದ ಗೂಳಿಹಟ್ಟಿಶೇಖರ್, ಡಿ.ಸುಧಾಕರ್, ವೆಂಕಟರಮಣಪ್ಪ, ಪಿ.ಎಂ.ನರೇಂದ್ರಸ್ವಾಮಿ ಹಾಗೂ ಶಿವರಾಜ್ ತಂಗಡಗಿ ಅವರ ಭವಿಷ್ಯ ಡೋಲಾಯಮಾನವಾದಂತಾಗಿದೆ.

ಐವರು ಪಕ್ಷೇತರ ಶಾಸಕರ ಅನರ್ಹತೆ ಕುರಿತು ವಾದ - ವಿವಾದ ಆಲಿಸಿದ ನ್ಯಾಯಮೂರ್ತಿ ಶಾಂತನಗೌಡರ್, ಅಬ್ದುಲ್ ನಜೀರ್ ಹಾಗೂ ಎ.ಎಸ್. ಬೋಪಯ್ಯ ಅವರನ್ನೊಳಗೊಂಡ ಪೂರ್ಣಪೀಠ ಒಮ್ಮತದ ನಿರ್ಧಾರ ಪ್ರಕಟಿಸಿ, ಸಂವಿಧಾನದ ಹತ್ತನೇ ಪರಿಚ್ಛೇದದಡಿ ಜನಪ್ರತಿನಿಧಿಯಾದವರು ಜನರ ಆಶಯಗಳನ್ನು ಪೂರೈಸಬೇಕು. ಆದರೆ ಈ ಕರ್ತವ್ಯದಲ್ಲಿ ಐದು ಮಂದಿ ವಿಫಲರಾಗಿದ್ದಾರೆ. ಹೀಗಾಗಿ ಇವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿ, ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಕೈಗೊಂಡ ಕ್ರಮ ಸರಿಯಾಗಿದೆ ಎಂದು ಪೂರ್ಣ ಪೀಠ ತೀರ್ಪು ನೀಡಿದೆ.

**ಜನಪ್ರತಿನಿಧಿಗಳು ಜನರ ಆಶಯಕ್ಕೆ ವಿರುದ್ಧವಾಗಿ ನಡೆಯುವ ಪ್ರಕರಣಗಳು ಇನ್ನು ಮುಂದೆ ನಡೆಯಬಾರದು ಎಂದು ಹೇಳಿರುವ ನ್ಯಾಯಾಲಯ, ಸ್ಪೀಕರ್ ಕ್ರಮವನ್ನು ರದ್ದುಪಡಿಸುವಂತೆ ಕೋರಿ ಪಕ್ಷೇತರ ಶಾಸಕರು ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿದೆ.**

ಸಭಾಧ್ಯಕ್ಷರು ಯಾವುದೇ ದುರುದ್ದೇಶದಿಂದ ಈ ಸದಸ್ಯರನ್ನು ಅನರ್ಹಗೊಳಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಜನಪ್ರತಿನಿಧಿಗಳು ಜನರ ಆಶಯಕ್ಕೆ ವಿರುದ್ಧವಾಗಿ ನಡೆಯುವ ಪ್ರಕರಣಗಳು ಇನ್ನು ಮುಂದೆ ನಡೆಯಬಾರದು ಎಂದು ಹೇಳಿರುವ ಪೀಠ, ಸ್ಪೀಕರ್ ಕ್ರಮವನ್ನು ರದ್ದುಪಡಿಸುವಂತೆ ಕೋರಿ ಪಕ್ಷೇತರ ಶಾಸಕರು ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿದೆ.

ಇದರಿಂದ ಆಡಳಿತಾರೂಢ ಬಿಜೆಪಿ ಸರಕಾರ ಮತ್ತೊಂದು ಕಂಟಕದಲ್ಲಿ ಗೆಲುವು ಸಾಧಿಸಿದಂತಾಗಿದೆ.

ಪಕ್ಷೇತರ ಶಾಸಕರನ್ನು ಕಳೆದ ಅಕ್ಟೋಬರ್ 10 ರಂದು ಪಕ್ಷಾಂತರ ನಿಷೇಧ ಕಾಯ್ದೆ ಉಲ್ಲಂಘಿಸಿದ ಆರೋಪದ ಮೇಲೆ ವಿಧಾನಸಭಾಧ್ಯಕ್ಷ ಕೆ.ಜಿ.

(4ನೇ ಪುಟಕ್ಕೆ)

### ಸೂರಗೊಂಡನಕೊಪ್ಪದಲ್ಲಿ ಇಂದಿನ ಸೇವಾಲಾಲ್ ಜಯಂತ್ಯೋತ್ಸವಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ

ಬಂಜಾರ ಜನಾಂಗದ ಕುಲಗುರು ಸಂತ ಶ್ರೀ ಸೇವಾಲಾಲ್ ಮಹಾರಾಜರವರ 272ನೇ ಜಯಂತ್ಯೋತ್ಸವ ಮತ್ತು ಮರಿಯಮ್ಮ ದೇವಿಯ ಜಾತ್ರಾ ಮಹೋತ್ಸವವು ಇಂದು ಬೆಳಿಗ್ಗೆ 11.30ಕ್ಕೆ ಹೊನ್ನಾಳಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ನಡೆಯಲಿದೆ.

ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸುವರು, ಶ್ರೀ ಸೇವಾಲಾಲ್ ಗುರುಗಳ ವಂಶಸ್ಥರಾದ ಶ್ರೀ ರಾಮರಾವ್ ಮಹಾರಾಜ್ ಉಪಸ್ಥಿತರಿರುವರು.

(4ನೇ ಪುಟಕ್ಕೆ)

### ಎಂ.ಪಿ.ಪ್ರಕಾಶ್ ವಿಧಿವಶರಾದ ದಿನವೇ ಆದೇಶ !

## ಹುಲಿಗುಡ್ಡ ಏತನೀರಾವರಿ ಕಛೇರಿಗಳ ಸ್ಥಳಾಂತರಕ್ಕೆ ತಡೆ

ಹೂವಿನಹಡಗಲಿ, ಫೆ.14- ಇಲ್ಲಿನ ಎ.ಪಿ.ಎಂ.ಸಿ. ಹತ್ತಿರದ ಸಿಂಗಟಾಲೂರು - ಹುಲಿಗುಡ್ಡ ಏತ ನೀರಾವರಿ ಯೋಜನೆಯ ಕಛೇರಿಗಳನ್ನು ಡಂಬಳ ಗ್ರಾಮಕ್ಕೆ ಸ್ಥಳಾಂತರಗೊಳಿಸಿದ ಆದೇಶವನ್ನು ಕರ್ನಾಟಕ ನೀರಾವರಿ ನಿಗಮ ತಾತ್ಕಾಲಿಕವಾಗಿ ರದ್ದುಪಡಿಸಿದೆ. ಆದರೆ, ವಿಶೇಷ ಭೂ ಸ್ವಾಧೀನಾಧಿಕಾರಿ ಕಛೇರಿ ಗದಗ ನಗರಕ್ಕೆ ಸ್ಥಳಾಂತರಗೊಂಡಿದ್ದು, ಅದನ್ನು ತಡೆಯಿಡಿಯಲಾಗಿಲ್ಲ. ಅದು ಅಲ್ಲಿಯೇ ಮುಂದುವರೆದಿದೆ ಎಂಬುವುದು ಕರ್ನಾಟಕ ನೀರಾವರಿ ನಿಗಮದ ಮುಖ್ಯ ಆಡಳಿತಾಧಿಕಾರಿಗಳು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರದಿಂದ ತಿಳಿದು ಬರುತ್ತಿದೆ.

ಆಶ್ಚರ್ಯಕರ ಸಂಗತಿ ಎಂದರೆ, ಮಾಜಿ ಉಪಮುಖ್ಯಮಂತ್ರಿ ಎಂ.ಪಿ.ಪ್ರಕಾಶ್ ಅವರು ವಿಧಿವಶರಾದ ದಿನಾಂಕ 09-02-2011ರಂದೇ ಈ ತಾತ್ಕಾಲಿಕ ಆದೇಶ ಹೊರಬಿದ್ದಿದೆ. ಆದರೆ,

(4ನೇ ಪುಟಕ್ಕೆ)

## ಮಕ್ಕಳು ಮನೆಯ ವಾತಾವರಣದಲ್ಲಿ ಜಾತ್ಯತೀತರಾಗಿ ಬೆಳೆಯಬೇಕು : ನಟರಾಜ್ ಹುಳಿಯಾರ್

ಬೆಂಗಳೂರು, ಫೆ. 14- ಪಟ್ಟಭದ್ರ ಹಿತಾಸಕ್ತಿಗಳು ಸಮಾಜದಲ್ಲಿ ಜಾತಿ ಪದ್ಧತಿಗೆ ಬಲ ನೀಡಲು ಯತ್ನಿಸುತ್ತಿದ್ದ ಸಂದರ್ಭದಲ್ಲಿ ಬಸವಾದಿ ಶಿವಶರಣರು ಜಾತಿ ರಹಿತ ಸಮಾಜ ನಿರ್ಮಾಣಕ್ಕೆ ಮುಂದಾದರು. ಆದ್ಯ ವಚನಕಾರ ದೇವರ ದಾಸೀಮಯ್ಯ ಅವರಿಂದ ವಚನ ಸಾಹಿತ್ಯ ಆರಂಭವಾಯಿತು. ನಂತರ ವಚನಕಾರರಲ್ಲಿ ಪ್ರಮುಖವಾಗಿ ಬಸವಣ್ಣನವರು ಜಾತ್ಯತೀತ ಸಮಾಜ ಸ್ಥಾಪಿಸಲು ಅನುಭವ ಮಂಟಪ ಸ್ಥಾಪಿಸಿದರು. ಅಲ್ಲಿ ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾಗಿ ಅನೇಕ ಶರಣರು ಜಾತ್ಯತೀತ ಸಮಾಜದ ಪರವಾಗಿ ನಿಂತರು ಎಂದು ಗುಲ್ಬರ್ಗಾ ಕೇಂದ್ರ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ|| ನಟರಾಜ್ ಹುಳಿಯಾರ್

(4ನೇ ಪುಟಕ್ಕೆ)




## ಸೌರ ವಿದ್ಯುತ್ ಅಳವಡಿಸಿದ ಹೊಸ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ : ಕರಂದ್ಲಾಜೆ

ಬೆಂಗಳೂರು, ಫೆ. 14- ನೀರು ಕಾಯಿಸಲು ಕಡ್ಡಾಯವಾಗಿ ಸೌರ ವಿದ್ಯುತ್ ಸಂಪರ್ಕ ಹೊಂದಿರದ ಹೊಸ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡುವುದಿಲ್ಲ ಎಂದು ಇಂಧನ ಹಾಗೂ ಆಹಾರ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯ ಹಿನ್ನೆಲೆಯಲ್ಲಿ ಸೋಲಾರ್ ವಿದ್ಯುತ್ ಬಳಕೆ ಮಾಡಬೇಕಿದೆ.

ಹೊಸ ಮನೆಗಳಿಗೆ ಸೋಲಾರ್ ವಿದ್ಯುತ್ ವ್ಯವಸ್ಥೆಯನ್ನು ಅಳವಡಿಕೆ ಕಡ್ಡಾಯಗೊಳಿಸಿರುವುದನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಇದರಿಂದ ಹೊಸ ಮನೆಗಳಿಗೆ ಕಡ್ಡಾಯವಾಗಿ ಸೋಲಾರ್ ವಿದ್ಯುತ್ ವ್ಯವಸೆ ಅಳವಡಿಸಿಕೊಳ್ಳಬೇಕು.

ರಾಜ್ಯದಲ್ಲಿ ವಿದ್ಯುತ್ ಬೇಡಿಕೆಯ ಪ್ರಮಾಣ ಗಗನಕ್ಕೇರುತ್ತಿದ್ದು ಕಳೆದ ಶನಿವಾರ 164 ಮಿಲಿಯನ್ ಯೂನಿಟ್‌ಗಳಷ್ಟಿತ್ತು.

ಇದು ಹೊಸ ದಾಖಲೆಯಾಗಿದ್ದು, ಮುಂದಿನ ದಿನಗಳಲ್ಲಿ ಈ ಪ್ರಮಾಣ 170 ರಿಂದ 175 ಮಿಲಿಯನ್ ಯೂನಿಟ್‌ಗಳಿಗೆ ಏರಿಕೆಯಾದರೂ, ಬೇಸಿಗೆಯಲ್ಲಿ ವಿದ್ಯುತ್ ಅಭಾವ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

ಪವರ್ ಎಕ್ಸ್‌ಚೇಂಜ್‌ನಿಂದ ಒಂದು ಸಾವಿರ ಮೆಗಾವ್ಯಾಟ್ ಹಾಗೂ ಛತ್ತೀಸ್‌ಘಡದಿಂದ

(4ನೇ ಪುಟಕ್ಕೆ)

### ಪ್ರಧಾನಿ ಭೇಟಿ ಸಂದರ್ಭದಲ್ಲಿ ಮುಖ್ಯಮಂತ್ರಿ ಕಡೆಗಣನೆ

### ಕೇರಳ ವಿಧಾನಸಭೆಯಲ್ಲಿ ನಿರ್ಣಯ ಜಾರಿ

ತಿರುವನಂತಪುರಂ, ಫೆ. 14 - ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಇತ್ತೀಚೆಗೆ ಕೇರಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್ ಅವರನ್ನು ಕಡೆಗಣಿಸಲಾಗಿತ್ತು ಎಂದು ಕೇರಳ ರಾಜ್ಯ ವಿಧಾನಸಭೆ ವಿನೂತನ ಪ್ರತಿಭಟನಾ ನಿರ್ಣಯವನ್ನು ಜಾರಿಗೊಳಿಸಿದೆ.

ಇದೇ ಮೊದಲ ಬಾರಿಗೆ ಇಂತಹ ನಿರ್ಣಯವನ್ನು ಕಾನೂನು ಸಚಿವ ಎಂ.ವಿಜಯಕುಮಾರ್ ಮಂಡಿಸಿದರು. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಶಾಸಕರು ಒಂದು ಗಂಟೆ ಕಾಲ ಆಡಳಿತಾರೂಢ ಎಲ್.ಡಿ.ಎಫ್. ಜೊತೆ ವಾಗ್ವಾದ ನಡೆಸಿ ಸಭಾತ್ಯಾಗ ಮಾಡಿದರು. ಸಿಂಗ್ ಫೆಬ್ರವರಿ 10ರಂದು ಮೂರು ದಿನಗಳ ಭೇಟಿ ನೀಡಿದಾಗ ಮುಖ್ಯಮಂತ್ರಿಯನ್ನು ಕಡೆಗಣಿಸಲಾಗಿತ್ತು ಎಂದು ನಿರ್ಣಯದಲ್ಲಿ ಹೇಳಲಾಗಿದೆ.

✧ **ನವದೆಹಲಿ :** ಎರಡು ಹಂತಗಳಲ್ಲಿ ಒಟ್ಟು 2,000 ಕೋಟಿ ರೂ. ನೆರವು ಪಡೆದು ಕೊಂಡಿದ್ದ ಏರ್ ಇಂಡಿಯಾ, ಈಗ ಮತ್ತೆ 2,000 ಕೋಟಿ ರೂ.ಗಳ ನೆರವನ್ನು ಕೇಳಿದೆ.

### ಮಂಡಕ್ಕಿ ಮೆಣಸಿನ್ಕಾಯಿ

ಎಸ್.ಎಸ್.ಆನಂದ್




### ದೇವೇಗೌಡ, ಕುಮಾರ್‌ಗೆ ಅಧಿಕಾರ ದಾಹ

**- ಕೇಂದ್ರ ಸಚಿವ ಮೊಯ್ಲಿ**

ಹುಬ್ಬಳ್ಳಿ, ಫೆ. 14 - ದೇವೇಗೌಡ ಮತ್ತು ಕುಮಾರಸ್ವಾಮಿಗೆ ಅಧಿಕಾರ ದಾಹ. ಅದಕ್ಕಾಗಿ ಅವರು ಏನು ಬೇಕಾದರೂ ಮಾಡಬಲ್ಲರೆಂದು ಕೇಂದ್ರ ಕಾನೂನು ಸಚಿವ ವೀರಪ್ಪ ಮೊಯ್ಲಿ ಇಂದಿಲ್ಲಿ ಹೇಳಿದ್ದಾರೆ.

**ಅಕ್ರಮ ಗಣಿಗಾರಿಕೆ ತಡೆಗೆ**

ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಲು ಶೀಘ್ರದಲ್ಲೇ ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸಲಾಗುವುದೆಂದು ಅವರು ಹೇಳಿದ್ದಾರೆ.

**ಭ್ರಷ್ಟಾಚಾರ ನಿವಾರಣೆಗೆ**

ಭ್ರಷ್ಟಾಚಾರ ನಿವಾರಣೆಗೆ ಶೀಘ್ರದಲ್ಲೇ ಕೆಲವು ಕ್ರಮಗಳನ್ನು ಕೈಗೊಳ್ಳಲಾಗುವುದೆಂದದವರು ತಿಳಿಸಿದರು.


**ಶಿವ ಸಹಕಾರಿ ಬ್ಯಾಂಕ್ ನಿಯಮಿತ**

ಆಡಳಿತ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.

**ಪ್ರಕಟಣೆ**

ದಿನಾಂಕ 18.02.2011ನೇ ಶುಕ್ರವಾರ **'ತರಳಬಾಳು ಹುಣ್ಣಿಮೆ ಮಹೋತ್ಸವ'** ಮುಕ್ತಾಯ ಸಮಾರಂಭ **ಬೆಂಗಳೂರಿನ ಅರಮನೆ ಆವರಣದಲ್ಲೇ** ಇರುವ ಪ್ರಯುಕ್ತ ಬ್ಯಾಂಕಿನ ಬಹುತೇಕ ಸದಸ್ಯರು ಮತ್ತು ಗ್ರಾಹಕರು ಭಾಗವಹಿಸುವ ಪ್ರಯುಕ್ತ ಈ ಸಮಾರಂಭದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ **ದಿನಾಂಕ 18.02.2011ನೇ ಶುಕ್ರವಾರ** ಬ್ಯಾಂಕಿಗೆ ರಜಾ ಘೋಷಿಸಲಾಗಿದೆ. ಆದ್ದರಿಂದ ಬ್ಯಾಂಕಿನ ಯಾವತ್ತು ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ,

ಸಹಿ/- **ಪ್ರಧಾನ ವ್ಯವಸ್ಥಾಪಕರು**


### ಕಡ್ಲೇಬಾಳು ಗಂಗಮ್ಮ ನಿಧನ



ದಾವಣಗೆರೆ ತಾಲ್ಲೂಕು ಕಡ್ಲೇಬಾಳು ಗ್ರಾಮದ ವಾಸಿ, ಗುಡ್ಯಪ್ಪರ ಹಾಲಪ್ಪ (ನಿವೃತ್ತ ಶಿಕ್ಷಕರು) ಅವರ ಧರ್ಮಪತ್ನಿ ಕಡ್ಲೇಬಾಳು ಗಂಗಮ್ಮ (60) ಅವರು ದಿನಾಂಕ 14.02.2011ರ ಸೋಮವಾರ ಮಧ್ಯಾಹ್ನ 1.15 ಗಂಟೆಗೆ ನಿಧನರಾದರು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ, ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.02.2011ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಕಡ್ಲೇಬಾಳು ಗ್ರಾಮದಲ್ಲಿ ನಡೆಯಲಿದೆ.

**-ದುಃಖತಪ್ತ ಕುಟುಂಬ ವರ್ಗ**



|| ಶ್ರೀ ಗುರು ರೇಣುಕಾರ್ಚಾಯ ಪ್ರಸನ್ನ ||

**ಶುಭಾಶಯಗಳೊಂದಿಗೆ ದೇಹ ದಾನದ ಹಬ್ಬ**



**ಶುಭಾಶಯ**
**ಗುರು ಹಿರಿಯರಿಗೂ,**
**ನನ್ನ ತಂದೆ-ತಾಯಿ ದೇವರುಗಳಿಗೂ,**
**ನನ್ನ ಆತ್ಮೀಯ ಮಿತ್ರಬಂಧು ಬಾಂಧವರಿಗೂ,**
**ನನ್ನ ನಮನ ಸಲ್ಲಿಸುತ್ತೇನೆ.**
**ನನ್ನ ಚಿಗುರೊಡೆದ ಬಳ್ಳಿಗಳೇ**

**ಚಿಗುರೊಡೆದು ಮೊಗ್ಗಾಗಿ**
**ಮೊಗ್ಗರಳಿ ಹೂವಾಗಿ**
**ಹೂ....ವರಳಿ, ಪರಿಮಳದ ಕುಸುಮದಂತೆ,**
**ಇರುವ ನನ್ನ ಆತ್ಮೀಯ ಬಂಧು ಬಾಂಧವರೇ,**
**ಎಲ್ಲರೂ ಬನ್ನಿರಿ, ಆ ದೇವರ ಕೃಪೆಯಿಂದ ನನಗೆ**
**ನಿಮ್ಮೆಲ್ಲರ ಪ್ರೀತಿಯಲ್ಲಿ ನಾನು 65 ವಸಂತಗಳನ್ನು**
**ಕಳೆದು 66ರ ವಸಂತಕ್ಕೆ ಕಾಲಿಡುವ, ಸಂತೋಷ ಒದಗಿ ಬಂದಿದೆ,**
**ಆ ದೇವರನ್ನು ಕಾಣಲು ಮನುಜನಿಗೆ ಆಗುವುದಿಲ್ಲಾ,**
**ನಿಮ್ಮೆಲ್ಲರ ಪ್ರೀತಿಯಲ್ಲಿ ಆ ದೇವರನ್ನು ಕಾಣಬಹುದು, ಎಲ್ಲರೂ ಸೇರೋಣ,**
**ನಕ್ಕು ನಲಿಯೋಣ, ನಿಮ್ಮ ಬರುವಿಕೆಗಾಗಿ ಕಾಯುವ ನಿಮ್ಮ ಹಿತೈಷಿ,**



**ಯು.ಆರ್. ಪ್ರಮಿಳಮ್ಮ ರೇವಣಸಿದ್ದಪ್ಪ**

ಬನ್ನಿಕೋಡು ದಾವಣಗೆರೆ ವಾಸಿ, ವಿನೋಬನಗರ 3ನೇ ಮೇನ್, 14ನೇ ಕ್ರಾಸ್, ಅಮಿತ್ ಟಾಕೀಸ್ ಹಿಂಭಾಗ, ದಾವಣಗೆರೆ.

**66ರ ಹುಟ್ಟು ಹಬ್ಬದ ನಿಮಿತ್ತ ದೇಹದಾನದ ಹಬ್ಬ**

ತಮಗೆ ಸುಖ - ಸಂತೋಷ ನೀಡುವವರು

ಮಗಳು : **ಗೀತಾ ಸಂತೋಷ್‌ಕುಮಾರ್,** ಡಿ.ಡಿ.ಸಿ.ಸಿ. ಬ್ಯಾಂಕ್, ದಾವಣಗೆರೆ ಶಾಖೆ, ದಾವಣಗೆರೆ. **ಹಾಗೂ ಉದ್ದಾರ ವಂಶಸ್ಥರು, ಶ್ರೀಮತಿ ಶಾಂತಾ ಶಿವರಾಜ್ ಗವಾಯಿಗಳು,** ದಾವಣಗೆರೆ.

**ಎಲ್ಲರಿಗೂ ಆದರದ ಸ್ವಾಗತ**

ಸ್ಥಳ : **ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನ,** 1ನೇ ಮೇನ್, ಶಂಭುಲಿಂಗೇಶ್ವರ ದೇವಸ್ಥಾನದ ಎದುರು, ವಿನೋಬನಗರ, ದಾವಣಗೆರೆ. **ಫೋ.: 9481181387, 98802 99732**


## 25ನೇ ವರ್ಷದ ಪುಣ್ಯ ಸ್ಮರಣೆ



## ಲಿಂ. ತೆಲಗಿ ಉಜ್ಜಪ್ಪನವರು, ಗರಬೇರ

**ದಾವಣಗೆರೆ.**

# ನೀವು ಕಾಣಿರೆ ಎನ್ನ ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ

ಶ್ರೀ ಮದುಜ್ಜಯಿನಿ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಿರಿಗೆರೆಯಲ್ಲಿ ಚರಪಟ್ಟಾಧ್ಯಕ್ಷರಾಗಿ, ಸುಮಾರು ಅರವತ್ತು ವರ್ಷಗಳವರೆಗೆ ಜೀವನ ಸಾಗಿಸಿ, ಮಾಗಿ, ಲಿಂಗೈಕ್ಯರಾದ ಪರಮಪೂಜ್ಯ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರು ಲೌಕಿಕ ಜೀವನಕ್ಕೆ ವಿದಾಯ ಹೇಳಿ, ಎರಡು ವರ್ಷ ಕಳೆದು ಹೋಯಿತು. ವರ್ಷ ಕಳೆದಿದ್ದು ಗೊತ್ತಾಗಲ್ಲೇ ಇಲ್ಲ. ಅವರ ಎರಡನೇ ವರ್ಷದ ಸ್ಮರಣೋತ್ಸವದ ಈ ಸಂದರ್ಭದಲ್ಲಿ ಶ್ರೀಗಳ ಕುರಿತು ಒಂದು ಸ್ಮರಣೆ.

ದಿನಗಳು ಕಳೆಯುವುದು ಗೊತ್ತೇ ಆಗುವುದಿಲ್ಲ. ಯಾವುದಾದರು ಒಂದು ಘಟನೆ ನಡೆದರೆ, ಅದು ಒಂದು ವಾರದವರೆಗೆ ಅವರಿವರ ಬಾಯಲ್ಲಿ ಹರಿದಾಡಿ ಕೊನೆಗೆ ಆ ವಿಷಯ ಮರತೇ ಹೋಗಿಬಿಡುತ್ತದೆ. ಪುನಃ ಮನುಷ್ಯ ಮೊದಲಿನ ಸ್ಥಿತಿಗೆ ಬಂದು, ತನ್ನ ಯಥಾಪ್ರಕಾರ ಕೆಲಸಗಳಲ್ಲಿ ಮಗ್ನನಾಗಿ ಬಿಡುತ್ತಾನೆ. ಬಹುಶಃ ಈ ಕಾರಣಕ್ಕಾಗಿ 'ಕಾಲಾಯ ತಸ್ಮೈನಮಃ' ಎಂದು ಹೇಳುತ್ತಾರೇನೋ! 'ಕಾಲ'ವನ್ನು ಮೀರಿ ಯಾರು ಏನೂ ಮಾಡಲು ಆಗುವುದಿಲ್ಲ. ಹುಟ್ಟು ಮತ್ತು ಸಾವು ಸಹಜ ಕ್ರಿಯೆಗಳು. ಹುಟ್ಟಿದವರೆಲ್ಲಾ ಸಾಯಲೇಬೇಕು. ನಾನು ಅಮರ. ನನ್ನನ್ನು ಯಾರು ಏನು ಮಾಡಲು ಸಾಧ್ಯವಿಲ್ಲ ಎಂದು ಮೆರೆದ ರಾಜ, ಮಹಾರಾಜರು, ಅಧಿಕಾರಿಗಳು ಈ 'ಕಾಲ'ನ ಮುಂದೆ ಉಳಿದವರಿಲ್ಲ. ಎಲ್ಲರೂ ಸಾಯಲೇಬೇಕು. ಸತ್ತವರ ಪಾಲಿಗೆ ಏನೂ ಉಳಿಯುವುದಿಲ್ಲ. ಇಲ್ಲಿ ಇರುವವರಿಗೆ ಸತ್ತವರ ಜೀವಿತಾವಧಿಯಲ್ಲಿ ಅವರು ಮಾಡಿದ ಒಳ್ಳೆಯ ಕೆಲಸಗಳಿದ್ದರೆ, ನೆನೆಯುತ್ತಾ ಅವರ ಮಾರ್ಗದಲ್ಲಿ ನಡೆಯಲು ಪ್ರಯತ್ನ ಶೀಲರಾಗುವುದೊಂದೇ ದಾರಿ.

'ಗುರುವಾದಡೆ ಕಾಯಕದಿಂದಲೇ ಜೀವನ್ಮುಕ್ತಿ' ಎಂಬ ಶರಣರ ನುಡಿಗನುಸಾರವಾಗಿ ತಮ್ಮ ಜೀವನವನ್ನು ಸಾಗಿಸಿಕೊಂಡು ಬಂದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಕಾಯಾ, ವಾಚಾ, ಮನಸಾ ತಾವು ವಹಿಸಿಕೊಂಡ ಹುದ್ದೆಗೆ ಸ್ವಲ್ಪವೂ ಚ್ಯುತಿ ಬರದ ಹಾಗೆ ಕಾರ್ಯ ನಿರ್ವಹಿಸಿದಂತಹವರು. ಹೆಸರಿಗೆ ತಕ್ಕ ಹಾಗೆ ಚರಮೂರ್ತಿಗಳಾಗಿಯೇ ಒಂದೇ ಕಡೆ ನಿಂತ ನೀರಾಗದೆ, ಎಲ್ಲಾ ಕಡೆ ಸಂಚರಿಸಿ ಶಿಷ್ಯರ ಏಳಿಗೆಯ ಜೊತೆಗೆ, ತಮ್ಮ ಮಠಕ್ಕೆ ಅವರಿಂದ ಆಗಬೇಕಾದ ಕೆಲಸಗಳನ್ನು ಮಾಡಿಸುತ್ತಿದ್ದರು. ಈಗ ಮಠಕ್ಕೆ ಬರುವ ಶಿಷ್ಯರ ಸಂಖ್ಯೆ ಅಪಾರ. ದಾನಿಗಳ ಸಂಖ್ಯೆಯೂ ಜಾಸ್ತಿ. ಆದರೆ ಆಗಿನ ಕಾಲದಲ್ಲಿ ದಾನ ಕೊಡುವವರ ಸಂಖ್ಯೆ ಕಡಿಮೆ. ದಾನ ಕೊಡಬೇಕೆಂಬ ಮನಸ್ಸಿದ್ದರೂ, ಕೊಡಲು ಶಕ್ತಿ ಇರಲಿಲ್ಲ. ದುಡ್ಡಿನ ಚಲಾವಣೆ ಈಗಿನಷ್ಟು ಇರಲಿಲ್ಲ. ಹಣ ಸಿಗುತ್ತಿದ್ದುದೇ ಬಹಳ ಕಡಿಮೆ. ಆಗ ದುಡ್ಡಿಗೆ ಬೆಲೆ ಜಾಸ್ತಿ ಇತ್ತು. ಈಗ ವಸ್ತುಗಳಿಗೆ ಬೆಲೆ ಜಾಸ್ತಿಯಾಗಿದೆ. ಅದರಲ್ಲೂ ಇದು 'ಲಾಟರಿ' ಯುಗ. ಒಂದು ರೂ ಕೊಟ್ಟು ಇಂದು ಸಂಜೆ ಒಂದು ಟಿಕೇಟು ಖರೀದಿಸಿದರೆ, ನಾಳೆ ಬೆಳಗ್ಗೆ ಲಕ್ಷಾಧೀಶ್ವರ. ಇಂಥ ಯಾವ 'ಮಾಯಾ' ಚಟುವಟಿಕೆಗಳು ಇಲ್ಲದಿರುವಂತಹ ಕಾಲದಲ್ಲಿ ಸಂಘ-ಸಂಸ್ಥೆಗಳನ್ನು ಕಟ್ಟಿ ಬೆಳೆಸುವುದು ಸುಲಭದ ಮಾತಲ್ಲ.

ಮನುಷ್ಯ ಬೆವರು ಸುರಿಸಿ ದುಡಿದು ಹಣವನ್ನು ಗಳಿಸಿಬೇಕಾಗಿತ್ತು. ಗಳಿಸಿದ ಹಣವನ್ನು ಮಿತವಾಗಿ ಬಳಕೆ ಮಾಡಿಯೇ ಜೀವನ ಸಾಗಿಸಬೇಕಾಗಿತ್ತು. ಇತಿ-ಮಿತಿ ಇಲ್ಲದಿದ್ದರೆ ಭಿಕಾರಿಯಾಗಲು ಬಹಳ ಕಾಲ ಬೇಕಾಗುತ್ತಿರಲಿಲ್ಲ. ಈ ಕಾರಣದಿಂದ ಆಗಿನ ಜನರು ದಾನ ಕೊಡುವುದರಲ್ಲಿ ಹಿಂದೆ ಬಿದ್ದಿದ್ದರು. ಪರಮಪೂಜ್ಯ ಇಪ್ಪತ್ತನೆಯ ಜಗದ್ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಪ್ರವಚನಗಳ ಪರಿಣಾಮದಿಂದ ಜನರು ದಾನ ಮಾಡಲು ಸ್ವಲ್ಪಮಟ್ಟಿಗೆ ಮುಂದೆ ಬರಲು ಶುರುವಾದಾಗ, ಅವರಿಗೆ ಮತ್ತಷ್ಟು ಪ್ರೇರಣೆ ಕೊಟ್ಟು ಹೆಚ್ಚೆಚ್ಚು ದುಡಿಮೆ ಮಾಡಲು ಪೂಜ್ಯ ಶ್ರೀ ಮಲ್ಲಿಕಾರ್ಜುನ ಶ್ರೀಗಳು ಹುರಿದುಂಬಿಸಿದರು. ಇವರೀರ್ವರ ಕಾಲದಲ್ಲಿಯೇ ಅತ್ಯಂತ ದೀನಾವಸ್ಥೆಯಲ್ಲಿದ್ದ ಮಠವನ್ನು ಮೇಲ್ಮಟ್ಟಕ್ಕೆ ತಂದು, ಅವರ ಶಿಷ್ಯರ ಏಳಿಗೆಯನ್ನು ಕಂಡು ಸಂತಸವನ್ನೂ ಸಹ ಪಟ್ಟುಕೊಂಡಿದ್ದರು.


ಪೂಜ್ಯರು 1946ರಲ್ಲಿ ಚರಪಟ್ಟಾಧ್ಯಕ್ಷರಾಗಿ ಅಧಿಕಾರಕ್ಕೆ ಬಂದಾಗ ಸಮಾಜ ಹಾಗೂ ಮಠ ಈ ಎರಡರ ಸ್ಥಿತಿಯೂ ಅಷ್ಟಕಷ್ಟೇ. ಆದರೂ ಇದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ, ಜಗದ್ಗುರುಗಳು ಆಜ್ಞಾಪಿಸಿದ ಕಾರ್ಯವನ್ನು ಬಹಳ ಅಚ್ಚುಕಟ್ಟಾಗಿ ಮಾಡಿಕೊಂಡು ಹೋದಂತಹ ಪುಣ್ಯಪುರುಷರು. ಸ್ವಾಮಿಗಳು ಎಂಬ ಹಮ್ಮುಬಿಮ್ಮು ಎಲ್ಲಿ ಹುಡುಕಿದರೂ ಸಿಗುತ್ತಿರಲಿಲ್ಲ. ತಾವು ಮಾಡುವ ಕೆಲಸವನ್ನು ನೋಡಿ ಯಾರಾದರೂ ಶಹಬ್ಬಾಷ್ ಗಿರಿ ಕೊಡಲಿ ಎಂಬ ಆಸೆ-ಆಮಿಷಗಳು ಅವರಲ್ಲಿರಲಿಲ್ಲ. ತಮ್ಮ ಮನಸ್ಸಿನ ತೃಪ್ತಿ ಹಾಗೂ ತಾವು ನಂಬುವ ಸಿದ್ಧಾಂತಗಳಿಗೆ ಬದ್ಧವಾಗಿ ಕೆಲಸ ಮಾಡುತ್ತಿದ್ದರು. ತಮ್ಮ ಜೊತೆಗಿದ್ದ ಸಿಬ್ಬಂದಿಗಳನ್ನು ಪ್ರಸಾದದ ಸಂದರ್ಭದಲ್ಲಿ ಎಲ್ಲರ ಜೊತೆಗೂ ಸಹಪಂಕ್ತಿ ಭೋಜನ ಹಾಗೂ ಎಲ್ಲರೂ ಮಾಡಿದ್ದನ್ನೇ ಊಟ ತಾವೂ ಸಹ ಸ್ವೀಕರಿಸುತ್ತಿದ್ದರು. ಸುಮಾರು 30 ವರ್ಷಗಳ ಕಾಲ ಮಧ್ಯಾಹ್ನ ಒಂದೇ ಊಟ ಮಾಡುತ್ತಾ ಬಂದಿದ್ದರು. ಬೆಳಗಿನ ಪ್ರಸಾದ ಒಂದು ಬಾಳೆಹಣ್ಣು, ಒಂದು ಲೋಟ ಹಾಲು, ಪುನಃ ರಾತ್ರಿ ಒಂದು ಬಾಳೆಹಣ್ಣು, ಒಂದು ಲೋಟ ಹಾಲು, ಒಂದು ಲೋಟ ಮಜ್ಜಿಗೆ, ಮಧ್ಯಾಹ್ನದ ಪ್ರಸಾದಕ್ಕೆ 2 ಚಪಾತಿ, 2 ಚಮಚ ಅನ್ನ, ಒಂದು ಲೋಟ ಮಜ್ಜಿಗೆ, ಬಾಳೆ ಹಣ್ಣು ನಂತರ ಮತ್ತು ಶಾರೀರಿಕ ದಣಿವು ಹಾಗೂ ಔಷಧೋಪಚಾರಗಳನ್ನು ಸ್ವೀಕಾರ ಮಾಡಬೇಕಾಗಿ ಬಂದಾಗ, ವೈದ್ಯರು ಹಾಗೂ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಒತ್ತಾಯಕ್ಕೆ ಮಣಿದು ಬೆಳಗ್ಗೆ ಸ್ವಲ್ಪ ಉಪಹಾರ ಹಾಗೂ ರಾತ್ರಿ ಅಲ್ಪಾಹಾರ ಸ್ವೀಕರಿಸುವುದನ್ನು ರೂಢಿಸಿಕೊಂಡರು. ಬ್ರಾಹ್ಮೀ ಮೂಹೂರ್ತದಲ್ಲಿಯೇ ಎದ್ದು ಪಾರ್ಕ್‌ನಲ್ಲಿ ಸಂಚಾರ ಮಾಡುವುದು ಅವರ ಪದ್ದತಿ. ಒಮ್ಮೊಮ್ಮೆ ಅಲ್ಲಿ ತಿರುಗಾಡುತ್ತಿರುವಾಗ ಯಾರಾದರು ವಿದ್ಯಾವಂತರು, ನೌಕರರು ಬಂದು ನಮಸ್ಕರಿಸಿದರೆ ನೀವು ಬಿ.ಎ., ಎಂ.ಎ. ಓದಿದ ಜನ. ಸೂರ್ಯವಂಶದವರು ಅಂದರೆ ಸೂರ್ಯೋದಯವಾದ ಮೇಲೆ ಇವರು ಏಳುವುದು ಎಂಬ ಅರ್ಥದಲ್ಲಿ ಹಾಸ್ಯ ಮಾಡುತ್ತಿದ್ದರು. ಏಕೆ ಹೀಗೆ ಎಂದು ಯಾರಾದರೂ ಪ್ರಶ್ನಿಸಿದರೆ? ಇಂಗ್ಲಿಷಿನವರು ಪ್ರಪಂಚದ ಉದ್ದಗಲಕ್ಕೂ ಆಡಳಿತವನ್ನು ವಿಸ್ತರಿಸಿಕೊಂಡು, ಸೂರ್ಯನನ್ನು ಮುಳುಗಲು ಬಿಡುತ್ತಿರಲಿಲ್ಲ. ಅದಕ್ಕಾಗಿ ಆದರೂ ಅವರು ಹೇಳುವ ರೀತಿ ಇಂಗ್ಲಿಷ್ ಓದಿದವರು ಆಲಸಿಗಳು ಅಥವಾ ಮುಂಚೆ ಏಳುವುದಿಲ್ಲ ಎಂಬ ಅರ್ಥ ಬರುವಂತಿತ್ತು.

ಗುರುಗಳಾದವರು ಸಮಾಜಮುಖಿಗಳಾಗಿರಬೇಕು. ಸಮಾಜದ ಭಕ್ತರ, ಶಿಷ್ಯರ ದುಃಖ ದುಮ್ಮಾನಗಳು, ಕಷ್ಟ-ಕೋಟಲೆಗಳನ್ನು ತಿಳಿದು, ಅವುಗಳನ್ನು ಪರಿಹರಿಸಲು ಪ್ರಯತ್ನಿಸಿದಾಗ ಅಂತಹ ಗುರುಗಳು ಜನರಿಗೆ ಹತ್ತಿರವಾಗಿ, ಜನರ ಮನಸ್ಸಿನಲ್ಲಿ ಬಹಳ ಕಾಲ ಉಳಿಯುತ್ತಾರೆ. ಪೂಜ್ಯರು ತಮ್ಮ ಪ್ರವಾಸ ಕಾಲದಲ್ಲಿ ಹಳ್ಳಿ-ಹಳ್ಳಿಗಳಲ್ಲಿ ಸಂಚರಿಸಿ, ಅವರ ಕಷ್ಟ-ಕಾರ್ಪಣ್ಯಗಳಿಗೆ ಸ್ಪಂದಿಸುತ್ತಿದ್ದರು. ಜೊತೆಗೆ ಅವರು ಯಾವ ರೀತಿ ತಮ್ಮ ಕಸುಬಿನಲ್ಲಿ ಬದಲಾವಣೆ ಮಾಡಿಕೊಂಡರೆ ಪ್ರಗತಿ ಸಾಧಿಸಲು ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟು, ಅವರೆಲ್ಲರೂ ಮೇಲ್ಪಟ್ಟಕ್ಕೇರಲು ಸಹಕಾರಿಯಾಗಿದ್ದರು. ಪೂಜ್ಯರನ್ನು ಕೆಲವರು ಕೃಷಿಯೋಗಿ, ಕೆಲವರು ಕಾಯಕಯೋಗಿ, ಮತ್ತೆ ಕೆಲವರು ಕರ್ಮಯೋಗಿ ಎಂದು ಏನೆಲ್ಲ ವಿಶೇಷಣಗಳನ್ನು ಸೇರಿಸಿ ಸಂಬೋಧಿಸುವುದುಂಟು. ಪೂಜ್ಯರನ್ನು ಯಾವ ರೀತಿಯೇ ಕರೆದರೂ ಅದು ಸರಿ ಎನ್ನುವಷ್ಟರ ಮಟ್ಟಿಗೆ ಅವರ ನಡೆ-ನುಡಿಗಳಿದ್ದವು. ಅವರಿಗೆ ಹಠಯೋಗಿ, ಮೌನಯೋಗಿ ಎಂದು ಕರೆದರೂ ಸಹ ಒಪ್ಪುವಂತಿದ್ದವು. ಒಮ್ಮೆ ಮಾತಾಡಿದರೆ ಅದಕ್ಕೆ ಅವರು ಕಟಿಬದ್ಧರಾಗಿರುತ್ತಿದ್ದರು. ತಮ್ಮಿಂದ ಏನು ಮಾಡಲು ಸಾಧ್ಯವೋ ಅದನ್ನು ಮಾತ್ರ ಅವರು ಹೇಳುತ್ತಿದ್ದರು. ಆಗದ ವಿಷಯಕ್ಕೆ ಕೈಹಾಕಲು ಅವರು ಎಂದೂ ಪ್ರಯತ್ನಿಸುತ್ತಿರಲಿಲ್ಲ. ಬಹಳಷ್ಟು ಸಂದರ್ಭದಲ್ಲಿ ಮೌನಕ್ಕೆ ಶರಣಾಗುತ್ತಿದ್ದರು. ಅಂದರೆ ಆ ಕೆಲಸ ಆಗುವುದಿಲ್ಲವೆಂದೇ ತಿಳಿಯಬೇಕು.

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಬಹುಪ್ರಸಿದ್ಧಿ ಪಡೆದ 'ತರಳಬಾಳು ಹುಣ್ಣಿಮೆ' ಕಾರ್ಯ ಬಹಳ ವಿಜೃಂಭಣೆಯಿಂದ ಒಂಬತ್ತು ದಿನಗಳ ಕಾಲ ನಡೆಯುತ್ತಿರುವುದು ವಿದಿತವೇ ಆಗಿದೆ. ಒಂಬತ್ತು ದಿನಗಳ ಕಾಲ ನಡೆಯುವ ಜ್ಞಾನ ದಾಸೋಹದ ಜೊತೆಗೆ ಅನ್ನದಾಸೋಹವೂ ಸಹ 1968 ರವರೆಗೂ ನಡೆಯುತ್ತಿದ್ದ ಕಾಲದಲ್ಲಿ, ಪೂಜ್ಯರು ಆ ಒಂಬತ್ತು ದಿನಗಳು ಅನ್ನದಾಸೋಹದ ಮೇಲ್ವಿಚಾರಣೆಯನ್ನು ವಹಿಸಿ ನಡೆಸಿಕೊಂಡು ಹೋಗುತ್ತಿದ್ದರು. ಲಕ್ಷಾಂತರ ಭಕ್ತರಿಗೆ ಯಾವುದೇ ರೀತಿ ತೊಂದರೆಯಾಗದಂತೆ ವ್ಯವಸ್ಥೆ ಮಾಡಿಸುತ್ತಿದ್ದರು. ಇವರಿಗೆ ಸಹಾಯಕರಾಗಿ ಮುದ್ದಾಪುರದ ಗುರುಸಿದ್ದಪ್ಪ, ಎಲೆಬೇತೂರು ಮಹಾದೇವಪ್ಪ, ಶಿವಪುರದ ಗೌರಕ್ಕರ ಶಿವಲಿಂಗಪ್ಪ, ಗಂಗೂರು ಮಹೇಶ್ವರ ಮುಂತಾದವರು ಕೆಲಸ ನಿರ್ವಹಿಸುತ್ತಿದ್ದರು. ಶಿವಪುರದ ಮೊದಲಿನ ಹೆಸರು 'ಬೂದಿಹಾಳ್'. ಈ ಊರಿಗೆ 'ಶಿವಪುರ' ಎಂಬ ಹೆಸರು ಬರಲು ಮುಖ್ಯ ಕಾರಣೀಭೂತರು ಪರಮಪೂಜ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಗೌರಕ್ಕರ ಶಂಕರಪ್ಪ, ಮರವಂಜಿ ಮಹೇಶ್ವರಪ್ಪ, ಪೂಜಾರ್ ಮಹೇಶ್ವರಪ್ಪ, ಮರವಂಜಿ ಮಹದೇವಪ್ಪ ಮುಂತಾದವರು ಶರಣಧರ್ಮ ಹಾಗೂ ಬಸವಣ್ಣನ ವಿಚಾರಗಳಿಂದ ಪ್ರೇರೇಪಿತರಾಗಿ ಶರಣಧರ್ಮ ಪ್ರಚಾರಕ್ಕಾಗಿ ಶ್ರಮಿಸುವಂತಹವರಾಗಿದ್ದರು. ಜಗದ್ಗುರುಗಳ ಯಾವುದೇ ಕಾರ್ಯಕ್ರಮ ಎಲ್ಲಿಯೇ ನಡೆಯಲಿ ಇವರೆಲ್ಲ ತಪ್ಪದೇ ಭಾಗವಹಿಸುತ್ತಿದ್ದರು. ಹೀಗೆ ಪೂಜ್ಯರ ಕೃಪೆಗೆ ಪಾತ್ರರಾದ ಇವರು ತಮ್ಮ ಊರಿನಲ್ಲೂ ಏಕೆ 'ಶರಣ ಸಮ್ಮೇಳನ' ನಡೆಸಬಾರದು ಎಂದು ಆಲೋಚಿಸಿ, ಪೂಜ್ಯರಿಂದ ಆಶೀರ್ವಾದ ಪಡೆದು 'ಸಮ್ಮೇಳನ' ನಡೆಸಲು ಪ್ರಾರಂಭಿಸಿದರು. ಆಗ ಜಗದ್ಗುರುಗಳವರು 'ಬೂದಿಹಾಳ್' ಎಂಬ ಹೆಸರಿನ್ನು ಬದಲಿಸಿ 'ಶಿವಪುರ' ಎಂಬ ಹೆಸರನ್ನಿಟ್ಟರು. ಹಾಗೆ ಮಾಡಿದ್ದೇ ಶಿವ, ಆ ಊರಿನ ಕಾರ್ಯಪಲ್ಲಟವಾಗಿ ಹೋಯಿತು.

ಪರಮಪೂಜ್ಯ ಮಲ್ಲಿಕಾರ್ಜುನ ಶ್ರೀಗಳವರು ಚನ್ನಗಿರಿ, ತರೀಕೆರೆ ಹಾಗೂ ಕಡೂರು ತಾಲ್ಲೂಕುಗಳಲ್ಲಿ ದೀಪಾರಾಧನೆ ಕಾಣಿಕೆಗಾಗಿ ಸರ್ಕೀಟ್ ಮಾಡುತ್ತಿರುವಾಗ ಅಲ್ಲಿಯ ಶಿಷ್ಯರು ಅಡಿಕೆ, ಬಾಳೆ ತೋಟಗಳನ್ನು ಮಾಡಿಕೊಂಡು ಸಮೃದ್ಧ ಜೀವನವನ್ನು ನಡೆಸುವುದನ್ನು ಕಂಡು, ಶಿವಪುರದಲ್ಲಿ ಮೊಕ್ಕಾಂ ಮಾಡಿದಾಗ, ಅಲ್ಲಿಯೇ ಶಿಷ್ಯರಿಗೆ ತೋಟ ಮಾಡಲು ಪ್ರೇರೇಪಿಸಿದರು. ಆದರೂ ಅವರು ಅಳುಕು ಮನಸ್ಸಿನಿಂದಲೇ ಪ್ರಾರಂಭಿಸಿದ ತೋಟಗಳು ಈಗ ಸಾಕಷ್ಟು ಫಸಲು ಕೊಟ್ಟು, ಅವರ ಬಡತನ ಬದಲಾಗುವಲ್ಲಿ ಯಶಸ್ವಿಯಾಗಿದೆ.

**ಪರಮಪೂಜ್ಯ ಮಲ್ಲಿಕಾರ್ಜುನ ಶ್ರೀಗಳವರು ಚನ್ನಗಿರಿ, ತರೀಕೆರೆ ಹಾಗೂ ಕಡೂರು ತಾಲ್ಲೂಕುಗಳಲ್ಲಿ ದೀಪಾರಾಧನೆ ಕಾಣಿಕೆಗಾಗಿ ಸರ್ಕೀಟ್ ಮಾಡುತ್ತಿರುವಾಗ ಅಲ್ಲಿಯ ಶಿಷ್ಯರು ಅಡಿಕೆ, ಬಾಳೆ ತೋಟಗಳನ್ನು ಮಾಡಿಕೊಂಡು ಸಮೃದ್ಧ ಜೀವನವನ್ನು ನಡೆಸುವುದನ್ನು ಕಂಡು, ಶಿವಪುರದಲ್ಲಿ ಮೊಕ್ಕಾಂ ಮಾಡಿದಾಗ, ಅಲ್ಲಿಯೇ ಶಿಷ್ಯರಿಗೆ ತೋಟ ಮಾಡಲು ಪ್ರೇರೇಪಿಸಿದರು. ಆದರೂ ಅವರು ಅಳುಕು ಮನಸ್ಸಿನಿಂದಲೇ ಪ್ರಾರಂಭಿಸಿದ ತೋಟಗಳು ಈಗ ಸಾಕಷ್ಟು ಫಸಲು ಕೊಟ್ಟು, ಅವರ ಬಡತನ ಬದಲಾಗುವಲ್ಲಿ ಯಶಸ್ವಿಯಾಗಿದೆ.**



ಆರಂಭದಲ್ಲಿ ಬಾವಿಗಳನ್ನು ತೋಡಿಸಿ, ಆ ನೀರಿನಿಂದಲೇ 'ಕಪಿಲೆ'ಯಿಂದ ನೀರಾಯಿಸಿ ತೋಟ ಮಾಡಿದ್ದರು. ಬಾವಿಯ ಜಲವರಿ ಬತ್ತಿದ ಮೇಲೆ ಬೋರ್‌ವೆಲ್ ಮುಖಾಂತರ ನೀರು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಈಗಲೂ ಕೆಲವರು ರಿಂಗ್ ಬಾವಿಗಳನ್ನು ಮಾಡಿಕೊಂಡು, ಅದರಲ್ಲೇ ತಮ್ಮ ತೋಟಗಳನ್ನು ಉಳಿಸಿಕೊಂಡಿದ್ದಾರೆ. ಕೃಷಿಗೆ ಸಂಬಂಧಿಸಿದ ಯಾವುದೇ ಹೊಸ ಸಂಶೋಧನೆ ಬಂದ ಕೂಡಲೇ ಅದರ ಪ್ರಯೋಗವನ್ನು ಮಾಡಿಸಿ ಪ್ರಯೋಜನ ಪಡೆದುಕೊಳ್ಳುವುದರಲ್ಲಿ ಪೂಜ್ಯರು ಸದಾ ಮುಂದಾಗಿರುತ್ತಿದ್ದರು. ಕೆಲವು ಪ್ರಗತಿಪರ ರೈತರ ಸಲಹೆ - ಸಹಕಾರ ಪಡೆದು ಅದರಂತೆ ತಮ್ಮ ಜಮೀನುಗಳಲ್ಲೂ ಅದರ ಪ್ರಯೋಗ ಮಾಡುತ್ತಿದ್ದರು. ಸರಳ ಜೀವನ ನಡೆಸುತ್ತಾ, ಯಾವ ಕೀರ್ತಿ, ಪ್ರಚಾರ, ಅಬ್ಬರ, ಆಡಂಬರಗಳಿಗೆ ಅವಕಾಶ ಕೊಡದೆ ತಾವಾಯಿತು ತಮ್ಮ ಬದುಕಾಯಿತೆಂದು ಕಾಯಕದಲ್ಲಿ ತೊಡಗಿಸಿಕೊಂಡಂತವರು ಸಮಾಜದ ಶಿಷ್ಯರು ಕರೆಯುತ್ತಿದ್ದ ಕಲ್ಯಾಣ ಮಹೋತ್ಸವ, ಶಿವಗಣಾರಾಧಾನೆ ಮುಂತಾದ ಸಮಾರಂಭಗಳಲ್ಲಿ ಭಾಗವಹಿಸಿ, ಭಕ್ತರ ಮನೆಯಲ್ಲಿ ಪೂಜೆ, ಪ್ರಸಾದ ಮಾಡಿಕೊಂಡು, ಶಿಷ್ಯರಿಗೆ ಲಿಂಗತತ್ವದ ಅರಿವನ್ನು ತಿಳಿಸುತ್ತಿದ್ದರು. ಜೊತೆಗೆ ಬಸವಾದಿ ಪ್ರಮಥರ ಆದರ್ಶಗಳನ್ನು ನೀವೂ ಸಹ ಪಾಲಿಸಿಕೊಂಡು ಹೋದರೆ ಜೀವನ ಪಾವನವಾಗುವುದೆಂದು ಅಪ್ಪಣೆ ಕೊಡಿಸುತ್ತಿದ್ದರು.

ಪರಮಪೂಜ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಆಡಳಿತಾವಧಿಯಲ್ಲಿ ಅವರು ಆಜ್ಞಾಪಿಸಿದ ಕೆಲಸಗಳನ್ನು ಚಾಚೂ ತಪ್ಪದೇ ಮಾಡಿ ಮುಗಿಸುತ್ತಿದ್ದರು. ಈಗಿನ ಶ್ರೀ ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಅಧಿಕಾರವಧಿಯಲ್ಲೂ ಅವರ ನಿಲುವಿಗೆ ಬದ್ಧರಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದರು. ಸಮಾಜದ ಒಳಿತಿನ ಬಗ್ಗೆ ಸದಾ ಚಿಂತನೆಯಲ್ಲಿರುತ್ತಿದ್ದರು. ಸಾಮಾಜಿಕವಾಗಿ ಎಲ್ಲಿ ಏನು ಮಾಡಿದರೆ ಅನುಕೂಲ ಎಂಬ ಯೋಚನೆ ಯಾವಾಗಲೂ ಇರುತ್ತಿತ್ತು. ವಯೋಮಾನಕ್ಕೆ ಅನುಗುಣವಾಗಿ ಅವರಿಗೆ ಅಸ್ತಮಾ ಕಾಯಿಲೆ ಬಂದು ಬಹಳ ತೊಂದರೆ ಅನುಭವಿಸಿದರು. ಅದರಿಂದ ಪಾರಾಗಲೂ ಆಸ್ಪತ್ರೆ, ನಾಟಿ ವೈದ್ಯರು ಎಲ್ಲರನ್ನೂ ಕಂಡು ಔಷಧೋಪಚಾರ ಮಾಡಿಸಿದರೂ ಅದು ನಿಯಂತ್ರಣಕ್ಕೆ ಬಾರದೆ, ಕೊನೆಗೆ ಅದೇ ಕಾಯಿಲೆ ಶ್ವಾಸಕೋಶದ ಅರ್ಬುದ ಕಾಯಿಲೆಯಾಗಿ ಪರಿವರ್ತನೆಯಾಗಿ ಅದರಿಂದಲೇ ಕೊನೆಯುಸಿರೆಳೆಯ ಬೇಕಾಯಿತು. ಆದರೂ ಆ ವರ್ಷ ದಾವಣಗೆರೆಯಲ್ಲಿ ನಡೆದ 'ತರಳಬಾಳು ಹುಣ್ಣಿಮೆ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿಲ್ಲವೆಂಬ ಮನೋವ್ಯಥೆ ಅವರನ್ನು ಕಾಡುತ್ತಿತ್ತು. ದೈಹಿಕವಾಗಿ ಬಳಲಿ ಬೆಂಡಾಗಿದ್ದರೂ ಮಾನಸಿಕವಾಗಿ ನಾವು ಅಲ್ಲಿ ಭಾಗವಹಿಸಿಬೇಕಾಗಿತ್ತು ಎಂಬ ಭಾವ ಅವರಲ್ಲಿ ಎದ್ದು ಕಾಣುತ್ತಿತ್ತು.

ಹನ್ನೆರಡನೆಯ ಶತಮಾನದ ಕನ್ನಡದ ಕಣ್ಮಣಿ, ವಿರಹಿಣಿ, ಆದರ್ಶ ಮಹಿಳೆ, ವಚನಕಾರ್ತಿ ಅಕ್ಕಮಹಾದೇವಿಯ ಹೆಸರನ್ನು ಕೇಳದ ಕನ್ನಡಿಗರಾರು? ಅವಳ ಈ ಒಂದು ವಚನ - ಅಳಿಸಂಕುಳವೆ, ಮಾಮರವೆ, ಬೆಳದಿಂಗಳೆ, ಕೋಗಿಲೆಯೇ। ನಿಮ್ಮನೆಲ್ಲರನೂ ಒಂದು ಬೇಡುವೆನು, ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡೊಡೆ। ಕರೆದು ತೋರಿರೆ। ಎಂದು ಹೇಳುವ ಮಾತುಗಳನ್ನು ಓದಿದ ಯಾರಿಗಾದರೂ ಮನಸ್ಸು ಕರಗದೆ ಇರದು. ಈ ವಚನವನ್ನು ಇಲ್ಲಿ ಉಲ್ಲೇಖಿಸಲು ಮುಖ್ಯ ಕಾರಣವೆಂದರೆ, ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನದ ಆಡಳಿತಕ್ಕೆ ಒಳಪಟ್ಟ ಮಠಗಳಾದ ಮರವಂಜಿ, ಯಲಹಂಕ, ಹರಳಕಟ್ಟೆ, ಸಿರಿಗೆರೆ, ಹಾಲ್ಕುರಿಕೆ ಮುಂತಾದ ಕಡೆಗಳಲ್ಲಿರುವ ತೋಟಗಳು ಮತ್ತು ಅಲ್ಲಿರುವ ತೆಂಗು, ಅಡಿಕೆ, ಬಾಳೆ ಹಾಗೂ ಇತರೆ ಹಣ್ಣಿನ ಗಿಡಮರಗಳು ಈ ವರ್ಷ ಅತ್ಯಧಿಕ ಬಿಸಿಲಿನ ದಗೆಗೆ ಧಣಿದು, ಆಕಾಶದಲ್ಲಿ ಸ್ವಚ್ಛಂದವಾಗಿ ಹಾರಾಡುವ ಪಕ್ಷಿಗಳನ್ನು ಕಂಡು ನೀವು ಕಾಣಿರೆ, ನೀವು ಕಾಣಿರೆ ಎನ್ನ ಗುರು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ, ಅವರಿಲ್ಲದೆ ನಮ್ಮ ಆರೈಕೆ ಕುಂದಿದಂತಾಗಿದೆ. ನಮ್ಮನ್ನಾರೂ ಸರಿಯಾಗಿ ವಿಚಾರಿಸುತ್ತಿಲ್ಲ. ಈ ತೋಟದಲ್ಲಿ ಕೆಲಸ ಮಾಡಿಕೊಂಡಿರುವ ಅಣ್ಣಗಳಿರಾ ನೀವು ಕಾಣಿರೆ, ನೀವು ಕಾಣಿರೆ, ಕಂಡೊಡೆ ಎನ್ನ ಗುರು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಕರೆದು ತೋರಿರೆ ಎಂದು ಕೇಳುತ್ತಿವೆ. ಬೆಳದಿಂಗಳೆ, ಕೋಗಿಲೆ ನೀವು ಕಾಣಿರೆ, ನೀವು ಕಾಣಿರೆ, ಕಂಡೊಡೆ ಎನ್ನ ಗುರು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಕರೆದು ತೋರಿರೆ. ಪೂಜ್ಯರು ತೋಟಕ್ಕೆ ಹೋದರೆ ಪ್ರತಿಯೊಂದು ಮರಗಿಡಗಳ ಹತ್ತಿರಕ್ಕೆ ಹೋಗಿ ನೋಡಿ ಅದರ ಕುಂದುಕೊರತೆಯನ್ನು ಅರಿತು ಮುಂದೆ ಸಾಗುತ್ತಿದ್ದರು. ಪೂಜ್ಯರ ಈ ಮಮತೆ ಆ ಗಿಡಗಳಿಂದ ಈ ರೀತಿ ಮಾತಾಡಿಸಿದರೆ ಆತಿಶಯೋಕ್ತಿಯಾಗಲಾರದು ಅಲ್ಲವೇ !

**- ಡಾ॥ ಎಂ.ಈಶ್ವರ ಶರ್ಮ**
ದಾವಣಗೆರೆ.

# ತರಳಬಾಳು ಹುಣ್ಣಿಮೆಯಲ್ಲಿಂದು



ನಾಡಹಬ್ಬವಾಗಿ ಸರ್ವಜನಾದರಣೆ ಗಳಿಸಿರುವ ತರಳಬಾಳು ಹುಣ್ಣಿಮೆ ಮಹೋತ್ಸವವು ಬೆಂಗಳೂರಿನ ಅರಮನೆ ಆವರಣ (ಕೃಷ್ಣ ವಿಹಾರ) ದಲ್ಲಿ ನಡೆಯುತ್ತಿದ್ದು, ಆರನೇ ದಿನವಾದ ಇಂದಿನ ಕಾರ್ಯಕ್ರಮದ ವಿವರ :

ಸಂಜೆ 6.30ಕ್ಕೆ ತರಳ ಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಇಂದು ಸಂಜೆ ಏರ್ಪಾಡಾಗಿರುವ ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಶ್ರೀ ಡಾ. ಶಿವಕುಮಾರ ಮಹಾಸ್ವಾಮೀಜಿ ಆಶೀರ್ವಚನ ನೀಡುವರು.

ಗ್ರಾಮೀಣಾಭಿವೃದ್ಧಿ ಸಚಿವ ಜಗದೀಶ್ ಶೆಟ್ಟರ್, ಉನ್ನತ ಶಿಕ್ಷಣ ಸಚಿವ ಡಾ. ವಿ.ಎಸ್. ಆಚಾರ್ಯ, ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್, ಕರ್ನಾಟಕ ರೈತ ಸಂಘದ ಅಧ್ಯಕ್ಷ ಕೆ.ಎಸ್. ಪುಟ್ಟಣ್ಣಯ್ಯ ಅವರುಗಳು ಮುಖ್ಯ ಅತಿಥಿಗಳಾಗಿದ್ದಾರೆ.

ಶಾಸಕರುಗಳಾದ ರೋಷನ್‌ಬೇಗ್, ಡಿ.ಎಸ್. ಸುರೇಶ್ ಅವರುಗಳು ವಿಶೇಷ ಆಹ್ವಾನಿತರುಗಳಾಗಿ ಭಾಗವಹಿಸುವರು.

'ಬಾಳಿಗೊಂದು ನಂಬಿಕೆ' ವಿಷಯ ಕುರಿತು ಚಿಂತಕ ಡಾ. ಗುರುರಾಜ ಕರ್ಜಗಿ ಮತ್ತು 'ಹೃದಯ ಮತ್ತು ಹೃದಯವಂತಿಕೆ' ವಿಷಯ ಕುರಿತು ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಅವರುಗಳು ಉಪನ್ಯಾಸ ನೀಡುವರು.

ನಾಳೆ ಬುಧವಾರ ಸಂಜೆಯ ಕಾರ್ಯಕ್ರಮದಲ್ಲಿ ಬೇಲಿಮಠ ಸಂಸ್ಥಾನದ ಶ್ರೀ ಶಿವರುದ್ರ ಮಹಾಸ್ವಾಮೀಜಿ ಆಶೀರ್ವಚನ ನೀಡುವರು.

ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹೆಚ್. ಬಿಲ್ಲಪ್ಪ, ಇಂಧನ ಸಚಿವೆ ಶೋಭಾ ಕರಂದ್ಲಾಜೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ॥ ಮನು ಬಳಿಗಾರ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಲೋಕಸಭೆ ಸದಸ್ಯ ಜನಾರ್ಧನ ಸ್ವಾಮಿ, ಶಾಸಕ ಬಿ.ಪಿ. ಹರೀಶ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು.

'ಜಂಗಮಕ್ಕಳಿವಿಲ್ಲ' ವಿಷಯ ಕುರಿತು ವಿಶ್ರಾಂತ ಪ್ರಾಧ್ಯಾಪಕ ಡಾ. ಹಂ.ಪ. ನಾಗರಾಜಯ್ಯ ಮತ್ತು 'ನಾವೇಕೆ ಬದಲಾಗಬೇಕು' ವಿಷಯ ಕುರಿತು ಪತ್ರಕರ್ತ ಹೆಚ್.ಆರ್. ರಂಗನಾಥ್ ಅವರುಗಳು ಉಪನ್ಯಾಸ ನೀಡಲಿದ್ದಾರೆ.

# ಬಜೆಟ್‌ನಲ್ಲಿ ದಲಿತರ ಹಕ್ಕೊತ್ತಾಯ ಸೇರ್ಪಡೆಗೆ ಆಗ್ರಹಿಸಿ ಪ್ರತಿಭಟನೆ

ದಾವಣಗೆರೆ, ಫೆ. 14- ರಾಜ್ಯ ಸರ್ಕಾರದ 2011-12ನೇ ಸಾಲಿನ ಆಯವ್ಯಯದಲ್ಲಿ ದಲಿತಪರ ಹಕ್ಕೊತ್ತಾಯ ಗಳನ್ನು ಸೇರ್ಪಡೆ ಮಾಡುವಂತೆ ಒತ್ತಾಯಿಸಿ, ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ಇಂದು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ನಡೆಸಿದರು.

ರಾಜ್ಯದ ದಲಿತರ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಕಳೆದ ವರ್ಷ 2010-11ರ ಆಯವ್ಯಯದಲ್ಲಿ ದಲಿತಪರ ಅಂಶಗಳನ್ನು ಅಳವಡಿಸಲು ಸಮಿತಿಯು ಹೋರಾಟ ನಡೆಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಸಂಘಟನೆಯ ನಾಯಕರೊಂದಿಗೆ ಮುಕ್ತವಾಗಿ ಚರ್ಚಿಸಿ, ದಲಿತರ ಹಕ್ಕೊತ್ತಾಯಗಳನ್ನು ಆಯವ್ಯಯದಲ್ಲಿ ಅಳವಡಿಸಿ, ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ ಯಾವುದೇ ಬೇಡಿಕೆ ಪರಿಪೂರ್ಣವಾಗಿ ಈವರೆಗೆ ಈಡೇರಿಸಲಿಲ್ಲ.

ದಲಿತ ನೌಕರರ ಆದಾಯ ಮಿತಿಯನ್ನು 1 ಲಕ್ಷ ರೂ.ಗಳಿಗೆ ನಿಗದಿಪಡಿಸಿರುವುದರಿಂದ ಸಾಮಾನ್ಯ ದಲಿತ ನೌಕರರು ಉನ್ನತ ಶಿಕ್ಷಣ ಹಾಗೂ ಇತರೆ ರಂಗಗಳಲ್ಲಿ ಸೌಲಭ್ಯ ವಂಚಿತರಾಗಿದ್ದಾರೆ. ಇವರ ಆದಾಯ ಮಿತಿಯನ್ನು ಇತರೆ ಜಾತಿಯವರಿಗಾಗಿರುವಂತೆ 5 ಲಕ್ಷ ರೂ.ಗಳಿಗೆ ನಿಗದಿಪಡಿಸಬೇಕು ಸೇರಿದಂತೆ ಮತ್ತಿತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಲಾಯಿತು.

ಆಲೂರು ನಿಂಗರಾಜ್, ಕುಂದುವಾಡ ಮಂಜುನಾಥ್, ಹೆಗ್ಗೆರೆ ರಂಗಪ್ಪ, ಲೋಕಿಕೆರೆ ತಿಪ್ಪೇಸ್ವಾಮಿ, ಹೂವಿನಮಡು ಅಂಜಿನಪ್ಪ, ದುಗ್ಗಪ್ಪ ಕೆ.ಟಿ.ಜೆ. ನಗರ, ಕಬ್ಬಳ್ಳಿ ಮೈಲಪ್ಪ, ಲೋಕಿಕೆರೆ ಕರಿಬಸಪ್ಪ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಸರ್ಕಾರ ವಜಾಕ್ಕೆ ಆಗ್ರಹಿಸಿ ಇಂದು ದಲಿತ ಸಂಘರ್ಷ ಸಮಿತಿ ಧರಣಿ

ದಾವಣಗೆರೆ, ಫೆ. 14- ಯಡಿಯೂರಪ್ಪ ಸರ್ಕಾರವನ್ನು ವಜಾಗೊಳಿಸಬೇಕೆಂದು ಒತ್ತಾಯಿಸಿ, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಮಿತಿ (ಡಾ॥ ಅಂಬೇಡ್ಕರ್ ವಾದ) ಯವರು ನಾಳೆ ದಿನಾಂಕ 15ರ ಮಂಗಳವಾರ ಬೆಳಿಗ್ಗೆ 11ಕ್ಕೆ ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ಕೈಗೊಳ್ಳುವರು.

ಈ ವಿಷಯವನ್ನು ದ.ಸಂ.ಸ. ಜಿಲ್ಲಾ ಸಮಿತಿಯ ಹೆಚ್. ಮಲ್ಲೇಶ್ ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸುತ್ತಾ, ಬಿಜೆಪಿ ಸರ್ಕಾರ ದಲಿತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆ. ನಗರದಲ್ಲಿ ಡಾ॥ ಅಂಬೇಡ್ಕರ್ ಭವನ, ಡಾ॥ ಜಗ ಜೀವನರಾಂ ಭವನವನ್ನು ನಿರ್ಮಾಣ ಮಾಡುವುದಾಗಿ ನೀಡಿದ ಭರವಸೆ, ಭರವಸೆಯಾಗಿಯೇ ಉಳಿದಿದೆ ಎಂದು ಟೀಕಿಸಿದರು.

ಹಲವಾಗಲು, ನಂದಿಗುಡಿಯಲ್ಲಿರುವ ನವೋದಯ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮೂಲಭೂತ ಸೌಲಭ್ಯ ಗಳನ್ನೇ ಕಲ್ಪಿಸಿಲ್ಲ. ಎಸ್ಸಿ, ಎಸ್ಟಿ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿರುವ ಯಡಿಯೂರಪ್ಪ ಅವರು, ದಲಿತ ಅಭಿವೃದ್ಧಿಯನ್ನು ಕಡೆಗಣಿಸಿದ್ದಾರೆ. ರಾಜ್ಯದಲ್ಲಿ ದಲಿತರ ವಿದ್ಯಾರ್ಥಿ ನಿಲಯಗಳು ದನದ ಕೊಟ್ಟಿಗೆಗಳಾಗಿವೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ನಿಂಗಪ್ಪ ಕಂದಗಲ್, ಸುರೇಶ್ ದೊಡ್ಡಮನಿ, ತಿಪ್ಪೇಸ್ವಾಮಿ ಅತ್ತಿಗೆರೆ, ಹನುಮಂತಪ್ಪ, ಭೀಮಪ್ಪ ಮತ್ತಿತರರಿದ್ದರು.

## ಹರಪನಹಳ್ಳಿಯಲ್ಲಿ ಇಂದು ಸಚಿವರ ಪ್ರವಾಸ

ಹರಪನಹಳ್ಳಿ ಪಟ್ಟಣಕ್ಕೆ ಇಂದು ಕಂದಾಯ ಸಚಿವ ಕರುಣಾಕರ ರೆಡ್ಡಿ ಆಗಮಿಸಲಿದ್ದು, ಎರಡು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಇಂದು ಬೆಳಿಗ್ಗೆ 10.30ಕ್ಕೆ ತಾಲ್ಲೂಕಿನ ಗರ್ಭಗುಡಿ ಗ್ರಾಮದಲ್ಲಿ ಶ್ರೀ ಸೋಮಲಿಂಗೇಶ್ವರ ದೇವಸ್ಥಾನಕ್ಕೆ ಅಡಿಗಲ್ಲು ಸಮಾರಂಭ ನೆರವೇರಿಸಲಿದ್ದಾರೆ. 11.30ಕ್ಕೆ ಪುರಸಭೆಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲಿದ್ದಾರೆ. 12.30ಕ್ಕೆ ಸಚಿವರು ಕಾರ್ಯಾಲಯದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

ನಾಳೆ ದಿನಾಂಕ 16 ರಂದು ಬೆಳಿಗ್ಗೆ 9.30ಕ್ಕೆ ಮತ್ತಿಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಹಾಲದಹಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ ಹಾಗೂ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ. 11.30ಕ್ಕೆ ಸಾಸ್ವಿಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಕುಣೇಮಾದಿಹಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ ಹಾಗೂ ಸಾರ್ವಜನಿಕರಿಂದ ಅಹವಾಲು ಸ್ವೀಕಾರ, 1.30ಕ್ಕೆ ಐಗಳ ಬಸಾಪುರದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ ಎಂದು ಸಚಿವರ ಸಹಾಯಕ ಓಂಕಾರ ಗೌಡ ತಿಳಿಸಿದ್ದಾರೆ.

## ನಗರದಲ್ಲಿಂದು ಜಿಲ್ಲಾ ಪಂಚಾಯತ್ ಚಲೋ





ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲೆಯ ಗ್ರಾಮ ಪಂಚಾಯ್ತಿ ನೌಕಕರು ಇಂದು ಜಿಲ್ಲಾ ಪಂಚಾಯತ್ ಚಲೋ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಸರ್ಕಾರವು ಬಿಲ್ ಕಲೆಕ್ಟರ್ ಹಾಗೂ ಕ್ಲರ್ಕ್ ಹುದ್ದೆಗಳನ್ನು ಅರೆಕುಶಲ ಎಂದು ಪರಿಗಣಿಸಿ ಅನ್ಯಾಯ ಮಾಡಿದೆ. ಬಡ್ತಿಯಲ್ಲಿ ಜೇಷ್ಠತಾ ಪಟ್ಟಿ ಪರಿಗಣಿಸಬೇಕು. ಸಂಬಳಕ್ಕೆ ಅನುದಾನದಲ್ಲಿ ಶೇ.40ರಷ್ಟು ಹಣವನ್ನು ಪ್ರತ್ಯೇಕ ಶೀರ್ಷಿಕೆ ಮೂಲಕ ನೀಡಬೇಕು. ಪ್ರಾವಿಡೆಂಟ್ ಫಂಡ್, ಜನಶ್ರೀ ವಿಮಾಯೋಜನೆ ಜಾರಿಯಾಗಬೇಕು. ಕಂಪ್ಯೂಟರ್ ಆಪರೇಟರ್‌ಗಳನ್ನು ಪಂಚಾಯತ್ ನೌಕರರೆಂದು ಪರಿಗಣಿಸಬೇಕು ಇತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ಗ್ರಾ.ಪಂ. ನೌಕರರು ಆಗ್ರಹಿಸಿದ್ದಾರೆ.

ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯ್ತಿ ಕಛೇರಿ ಮುಂದೆ ಪಂಚಾಯತ್ ನೌಕರರು ಪ್ರತಿಭಟನೆಗೆ ಆಗಮಿಸುವಂತೆ ಸಂಘದ ಜಿಲ್ಲಾಧ್ಯಕ್ಷ ಕೆ.ಎಲ್.ಭಟ್, ಜಿಲ್ಲಾ ಕಾರ್ಯದರ್ಶಿ ಡಿ.ಎಸ್.ಭೈರೇಶ್ ತಿಳಿಸಿದ್ದಾರೆ.

## ನೇತ್ರ ಪರೀಕ್ಷಾ ಶಿಬಿರ

ದಾವಣಗೆರೆ, ಫೆ. 14- ದುರ್ಗಾದೇವಿ ಮಹಿಳಾ ಮಂಡಳಿ ವತಿಯಿಂದ ಇದೇ ದಿನಾಂಕ 17 ಮತ್ತು 18 ರಂದು ಉಚಿತ ನೇತ್ರ ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರವು ಸ್ಥಳೀಯ ಬಾಷಾ ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಲಿದೆ.

**ಅಭಿನಂದನೆಗಳು**



ದಾವಣಗೆರೆ ಜಿ.ಪಂ. ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಆತ್ಮೀಯರಾದ ಹೊಳೆಸಿರಿಗೆರೆ ಕ್ಷೇತ್ರದ ಶ್ರೀ ಟಿ. ಮುಕುಂದ ಅವರಿಗೆ ಹಾರ್ದಿಕ ಅಭಿನಂದನೆಗಳು.



**ಸಿರಿಗೆರೆ ರಾಜಣ್ಣ, ಮಾಜಿ ಸದಸ್ಯರು, ತಾ.ಪಂ., ಮಲೆಬೆನ್ನೂರು.**
**ಟಿ. ಶ್ರೀನಿವಾಸ್, ಗುತ್ತಿಗೆದಾರರು, ಮಲೆಬೆನ್ನೂರು.**







**ಹೃತ್ಪೂರ್ವಕ ಕೃತಜ್ಞತೆಗಳು**


ನಮ್ಮನ್ನು ಹರಪನಹಳ್ಳಿ ತಾಲ್ಲೂಕಿನ ವಿದ್ಯುತ್ ಗುತ್ತಿಗೆದಾರರ ಸಂಘದ ನೂತನ ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಲು ಸಹಕರಿಸಿದ ಹಾಗೂ ಹರಪನಹಳ್ಳಿ ತಾಲ್ಲೂಕಿನ ವಿದ್ಯುತ್ ಗುತ್ತಿಗೆದಾರರ ಸಂಘದ ಕಛೇರಿ ಪ್ರಾರಂಭೋತ್ಸವಕ್ಕೆ ಆಗಮಿಸಿದ ಬೆಸ್ಕಾಂ ಎಇಇ **ಜಯ್ಯಪ್ಪ** ಹಾಗೂ **ಸಿಬ್ಬಂದಿ ವರ್ಗದವರಿಗೆ** ಮತ್ತು **ದಾವಣಗೆರೆ ಜಿಲ್ಲಾ ಸಮಿತಿಯ ಪದಾಧಿಕಾರಿಗಳು**, ಪ್ರಾರಂಭೋತ್ಸವ ಸಮಾರಂಭಕ್ಕೆ **ಪ್ರತ್ಯಕ್ಷ- ಪರೋಕ್ಷವಾಗಿ ಸಹಕರಿಸಿದ ಬೆಸ್ಕಾಂ ಸಿಬ್ಬಂದಿ ಮತ್ತು ವಿದ್ಯುತ್ ಗುತ್ತಿಗೆದಾರರಿಗೆ** ಹಾಗೂ **ತಾಲ್ಲೂಕಿನ ಜನತೆಗೆ** ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.


**ಕೆ. ಅಂಜನೇಯ**
ಅಧ್ಯಕ್ಷರು


**ನಿಸಾರ್ ಅಹ್ಮದ್**
ಉಪಾಧ್ಯಕ್ಷರು


**ಜಿ.ಹೆಚ್. ನಾಗನಗೌಡ**
ಕಾರ್ಯದರ್ಶಿ


**ಎನ್. ಉಸ್ಮಾನ್**
ಖಜಾಂಚಿ


**ಪಿ.ಮಂಜುನಾಥ್**
ಜಿಲ್ಲಾ ಸಂಘಟನಾ ಕಾರ್ಯದರ್ಶಿ

**ಹರಪನಹಳ್ಳಿ ತಾಲ್ಲೂಕು ವಿದ್ಯುತ್ ಗುತ್ತಿಗೆದಾರರ ಸಂಘ**



॥ ಶ್ರೀ ಸಾಲೇಶ್ವರ ಪ್ರಸನ್ನ ॥

**ಗೃಹ ಪ್ರವೇಶ ಆಮಂತ್ರಣ ಪತ್ರಿಕೆ**



**ಶ್ರೀಮತಿ ಯಶೋಧಮ್ಮ ಕೋಂ. ರಾಮಪ್ಪ ಅಡ್ಮನಿ**
**ಸಾ॥ ರಾಣೇಬೆನ್ನೂರು**
ಇವರು ಮಾಡುವ ವಿಜ್ಞಾಪನೆಗಳು.

ಆತ್ಮೀಯರೇ,
ಶ್ರೀ ಬನಶಂಕರಿ ನಗರದಲ್ಲಿ ನೂತನವಾಗಿ ನಿರ್ಮಿಸಿರುವ

**R T A**
**'ಶ್ರೀ ರಾಮಾಂಜನೇಯ ನಿಲಯ'**

ಇದರ ಗೃಹ ಪ್ರವೇಶ ಮತ್ತು ವಾಸ್ತುಶಾಂತಿ ಸಮಾರಂಭವು ದಿನಾಂಕ 16.02.2011ನೇ ಬುಧವಾರ ನಡೆಯಲಿದೆ.

**ತಮ್ಮೆಲ್ಲರಿಗೂ ಆದರದ ಆಹ್ವಾನ**

ನಿಮ್ಮ ಬರುವಿಕೆಗಾಗಿ ಕಾತರಿಸುವವರು
✦ ಶ್ರೀಮತಿ ಶಿವಮ್ಮ, ಶ್ರೀ ಪಾಂಡುರಂಗಪ್ಪ ಅಡ್ಮನಿ
✦ ಶ್ರೀಮತಿ ಶಕುಂತಲಾ, ಶ್ರೀ ಲಕ್ಷ್ಮಪ್ಪ ಅಡ್ಮನಿ
✦ ಶ್ರೀಮತಿ ಗೀತಾ, ಶ್ರೀಮತಿ ಜ್ಯೋತಿ, ಶ್ರೀ ಚಿದಾನಂದ ಅಡ್ಮನಿ
✦ ಶ್ರೀಮತಿ ದೀಪಾ, ಶ್ರೀ ನಾಗರಾಜ ಅಡ್ಮನಿ
✦ ಶ್ರೀಮತಿ ಕುಸುಮ, ಶ್ರೀ ವೆಂಕಟೇಶ್ ಅಡ್ಮನಿ
✦ ಶ್ರೀಮತಿ ಮಧು, ಶ್ರೀ ಮಂಜುನಾಥ್ ಅಡ್ಮನಿ
✦ ಕು॥ ಕಾವ್ಯ ✦ ಚಿ॥ ವಿಷ್ಣು ✦ ಚಿ॥ ಅಭಿನಂದನ
✦ ಕು॥ ಭಾವನಾ

**ಶ್ರೀ ಮಾರುತಿ ಕಿರಾಣಿ ಸ್ಟೋರ್ಸ್**
ನೆಹರು ಮಾರ್ಕೆಟ್, ರಾಣೇಬೆನ್ನೂರು.

## ಪ್ರೇಮಾನಂದ!




ಈರ : ಏನಪಾ ಪ್ರೇಮಿಗಳ ದಿನಾಚರಣೆ ಆಚರಿಸಿದಿಯಾ?

**ಕೊಟ್ರ : ನಾನು ಆಚರಿಸಲಿಲ್ಲ. ಪ್ರೇಮಿಗಳು ಆಚರಿಸಿದ್ದನ್ನು ನೋಡಿದೆ.**

ಈರ : ಯಾವ ಪ್ರೇಮಿಗಳ ಪ್ರೀತಿ ವಿಶೇಷ ಅನಿಸ್ತು?

**ಕೊಟ್ರ : ಎಲ್ಲರ ಕಣ್ಣಿಗೆ ವೈರಿಗಳ ತರಹ ಕಾಣ್ತಿದ್ದ ಯಾವಾಗಲೂ ಜಗಳ ಆಡುತ್ತಿದ್ದವರು ಅಧಿಕಾರಕ್ಕಾಗಿ ಒಬ್ಬೊರಿಗೊಬ್ಬರು ಪ್ರೀತಿಸಿ ಮದುವೆಯಾಗಿದ್ದು!**

ಈರ : ಎಲ್ಲಲೇ?

**ಕೊಟ್ರ : ಮೈಸೂರಿನಲ್ಲಿ!**

ಈರ : ಅಲ್ಲಿ ಯಾರು?

**ಕೊಟ್ರ : ಕಮಲ ಮತ್ತು ದಳದವರು!**

ಈರ : ಹೌದು ನೋಡು ಅಲ್ಲೀಗ ಕಮಲ ಹೊತ್ತ ಮಹಿಳೆಯ ರಾಜ್ಯಭಾರ. ಇದಕ್ಕೆ ಕೈನೋರು ಏನಂತಾರೆ?

**ಕೊಟ್ರ : ಕೈ ಕೈ ಹಿಚುಕಿಕೊಂಡು ಕುತ್ಕೊಂಡಾರೆ!**

ಈರ : ಎಲ್ಲಾರು ಮಾಡುವುದು ಅಧಿಕಾರಕ್ಕಾಗಿ ಅನ್ನೋದು ಪ್ರೂವ್ ಆತು ನೋಡು. ಈ ಪ್ರೇಮಿಗಳ ದಿನದಂದು ನೀನು ನೋಡಿದ ವಿಶೇಷ ಭಗ್ನ ಪ್ರೇಮಿಗಳು ಯಾರು?

**ಕೊಟ್ರ : ಕಮಲದೋರು ಸೋಡಾ ಚೀಟಿ ಕೊಟ್ಟಿರೋ ಪಕ್ಷೇತರ ಪಾಂಡವರು !**

ಈರ : ಸರಿಯಾಗಿ ಹೇಳಿದಿ ನೋಡು! ಅದ್ಸರಿ ನೀನು ಯಾವ ಕಡೆ ಹೊರಟಿದಿಯಾ?

**ಕೊಟ್ರ : ಬಿಡದಿ ಕಡೆಗೆ!**

ಈರ : ಅಲ್ಲಿಗೆ ಯಾಕಲೆ?

**ಕೊಟ್ರ : ಒಂದು ನೂರು ನಿಸಾಮಿ ಫೋಟೊ ತಗೊಂಡು ಬರೋದಿಕ್ಕೆ!**

ಈರ : ಅವನ್ನು ತಗೊಂಡು ಏನು ಮಾಡ್ತಿಯಾ?

**ಕೊಟ್ರ : ನಮ್ಮ ತೋಟದ ತೆಂಗಿನ ಮರ ಬೆಳೆಸ್ತೀನಿ!**

ಈರ : ಅದೆಂಗಲೆ?

**ಕೊಟ್ರ : ಫೋಟೊಗಳನ್ನು ತಗೊಂಡು ಅವನ್ನು ಒಂದೊಂದಾಗಿ ಒಂದೊಂದು ತೆಂಗಿನ ಮರಕ್ಕೆ ಕಟ್ತೀನಿ!**

ಈರ : ಕಟ್ಟೋದ್ರಿಂದ ಮರ ಬೆಳೆದುಬಿಡ್ತಾವ?!

**ಕೊಟ್ರ : ಲೇ ಪೇಪರ್‌ನಾಗೆ ಓದಿದೆ. ನಿಸಾಮಿ ಫೋಟೋದಿಂದ ಬೂದಿ ಉದುರ್ತತಿ ಯಾರು ಬೇಕಾದ್ರು ಚೆಕ್ ಮಾಡಬಹುದು ಅಂತ. ಓದಿ ಖುಷಿ ಆತು. ತಕ್ಷಣ ಒಂದು ಐಡಿಯಾ ಬಂತು!**

**ಈರ : ಏನಂತ?**

**ಕೊಟ್ರ : ನಮ್ಮ ತೋಟದ ಒಂದೊಂದು ಮರಕ್ಕೂ ನಿಸಾಮಿ ಫೋಟೊ ಕಟ್ಟಿ ಭಕ್ತಿಯಿಂದ ಒಂದು ವಿನಂತಿ ಮಾಡೋಣ ಅಂತ!**

ಈರ : ಏನು ವಿನಂತಿ?

**ಕೊಟ್ರ : ಸ್ವಾಮಿ ಉದುರೊ□ೀದು ಉದುರುಸ್ತಿಯಾ ಬೂದಿ ಉದುರುಸ್ಬೇಡ, ಗೊಬ್ಬರ ಉದುರು□!!!**

**- ಆರ್.ಟಿ.**

## ಕೈ ತಪ್ಪಿದ ರ್‍ಯಾಂಕ್ : ನೇಣಿಗೆ ಶರಣು

ದಾವಣಗೆರೆ, ಫೆ.14- ಪ್ರಥಮ ರ್‍ಯಾಂಕ್ ಗಳಿಸಲಾಗಲಿಲ್ಲ ಎಂಬ ಕಾರಣದಿಂದ ಬೇಸತ್ತ ವಿದ್ಯಾರ್ಥಿಯೋರ್ವಳು ಆತ್ಮಹತ್ಯೆ ಮಾಡಿಕೊಂಡ ಘಟನೆ ನಗರದ ಎಸ್.ಎಸ್. ಬಡಾವಣೆಯಲ್ಲಿ ನಡೆದಿದೆ.

ಬಾಪೂಜಿ ಪಾಲಿಟೆಕ್ನಿಕ್‌ನ ಟೆಕ್ಸಟೈಲ್ ವಿಭಾಗದ 8ನೇ ಸೆಮಿಸ್ಟರ್ ನಲ್ಲಿ ವ್ಯಾಸಂಗ ಮಾಡುತ್ತಿದ್ದ ನಿಯಾತಜ್ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ.

ನಿಯಾತಾಜ್, ಕಳೆದ ಎಲ್ಲಾ ಸೆಮಿಸ್ಟರ್‌ಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದು, ಈ ಬಾರಿ ಪ್ರಥಮ ರ್‍ಯಾಂಕ್‌ಗಳಿಸಲು ಕೇವಲ ಆರು ಅಂಕ ಕಡಿಮೆಯಾದ ಕಾರಣ ಜಿಗುಪ್ಸೆಗೊಂಡು ಆತ್ಮಹತ್ಯೆಗೆ ಶರಣಾಗಿದ್ದಾಳೆ. ನಿಯಾತಾಜ್ ಅವರ ತಂದೆ ಮಹಮ್ಮದ್ ರಫೀಕ್ ಬ್ಯಾಂಕ್ ಉದ್ಯೋಗಿ, ತಾಯಿ ಶಿಕ್ಷಕಿ.

## ಸಾಧು ವೀರಶೈವ ಸಮಾಜದ ಮನವಿ

ದಾವಣಗೆರೆ, ಫೆ. 14 - ದೇಶದೆಲ್ಲೆಡೆ ಭಾರತ ಸರ್ಕಾರ 2011ರ ಜನಗಣತಿ ನಡೆಸುತ್ತಿದ್ದು, ಗಣತಿ ದಾಖಲೆ (ಫಾರಂ)ಯಲ್ಲಿ ಆರು ಧರ್ಮಗಳ ಹೆಸರುಗಳ ಕೋಡ್ ಇದೆ. ವೀರಶೈವ ಲಿಂಗಾಯಿತ ಧರ್ಮಕ್ಕೆ ಇದುವರೆಗೆ ಧರ್ಮದ ಕೋಡ್ ಇರುವುದಿಲ್ಲ. ಆದ್ದರಿಂದ ವೀರಶೈವ ಲಿಂಗಾಯತರು ದಾಖಲೆಯ ಏಳನೇ ಕಾಲಂನಲ್ಲಿ ಇತರೆ ಧರ್ಮ ಎಂದಿರುವ ಕಾಲಂನಲ್ಲಿ 'ವೀರಶೈವ ಲಿಂಗಾಯತ' ಎಂದೇ ಬರೆಸಿ ಎಂದು ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷರು ಮನವಿ ಮಾಡಿಕೊಂಡಿದ್ದಾರೆ.

## ಪಕ್ಷೇತರ ಶಾಸಕರ ಅನರ್ಹತೆ ಸರಿ

(1ನೇ ಪುಟದಿಂದ)

ಬೋಪಯ್ಯ ಶಾಸಕ ಸ್ಥಾನದಿಂದ ಅನರ್ಹಗೊಳಿಸಿದ್ದರು.

ಶಾಸಕ ಸ್ಥಾನದಿಂದ ಅನರ್ಹಗೊಳಿಸಿದ ವಿಧಾನಸಭಾಧ್ಯಕ್ಷರ ಕ್ರಮ ಸರಿಯಿಲ್ಲ. ಇದು ದುರುದ್ದೇಶಪೂರಿತ ಮತ್ತು ಈ ತೀರ್ಮಾನ ಕೈಗೊಳ್ಳುವ ಮುನ್ನ ತಮ್ಮ ಅಹವಾಲು ಕೇಳಲು ಸಮರ್ಪಕ ಕಾಲಾವಕಾಶ ನೀಡಿರಲಿಲ್ಲ. ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಪ್ರಭಾವಕ್ಕೆ ಮಣಿದು ವಿಧಾನಸಭಾಧ್ಯಕ್ಷರು ಇಂತಹ ತೀರ್ಪು ನೀಡಿದ್ದಾರೆ ಎಂದು ದೂರಿ ಐವರು ಪಕ್ಷೇತರ ಶಾಸಕರು ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದರು.

ಈ ಹಿನ್ನೆಲೆಯಲ್ಲಿ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯ ಕಳೆದ ಫೆಬ್ರವರಿ 1 ರಂದು ತನ್ನ ತೀರ್ಪನ್ನು ಕಾಯ್ದಿರಿಸಿತ್ತು.

ಇಂದು ತೀರ್ಪು ಪ್ರಕಟಿಸಿ, ಅರ್ಜಿದಾರರು ಹೇಳಿರುವಂತೆ ವಿಧಾನಸಭಾಧ್ಯಕ್ಷರ ಕ್ರಮ ದುರುದ್ದೇಶಪೂರಿತವಲ್ಲ ಹಾಗೂ ಐವರು ಪಕ್ಷೇತರ ಶಾಸಕರನ್ನು ಅನರ್ಹಗೊಳಿಸುವ ಮುನ್ನ ತಮ್ಮ ವಾದ ಮಂಡಿಸಲು ಶಾಸಕರಿಗೆ ಸೂಕ್ತ ಸಮಯಾವಕಾಶ ನೀಡಲಾಗಿದೆ ಎಂದು ಪೀಠ ಅಭಿಪ್ರಾಯಿಸಿದೆ.

ಐವರು ಪಕ್ಷೇತರ ಶಾಸಕರನ್ನು ಅನರ್ಹಗೊಳಿಸುವ ಸಂದರ್ಭದಲ್ಲಿ ವಿಧಾನಸಭಾಧ್ಯಕ್ಷರು ಸಹಜ ನ್ಯಾಯವನ್ನು ಮರೆತಿಲ್ಲ ಎಂದಿರುವ ನ್ಯಾಯ ಪೀಠ,ಜನಪ್ರತಿನಿಧಿಗಳಾದವರು ಜನರ ಆಶಯಕ್ಕೆ ವಿರುದ್ಧವಾಗಿ ಹೋಗುವಂತಿಲ್ಲ ಎಂದು ತನ್ನ ನೂರು ಪುಟಗಳಿಗೂ ಹೆಚ್ಚಿನ ತೀರ್ಪಿನಲ್ಲಿ ಹೇಳಿದೆ.

ಉಚ್ಚ ನ್ಯಾಯಾಲಯದ ಈ ತೀರ್ಪಿನ ಕುರಿತಂತೆ ದಿಗ್ಭ್ರಮೆ ವ್ಯಕ್ತಪಡಿಸಿರುವ ಪಕ್ಷೇತರ ಶಾಸಕರು, ಈ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವುದಾಗಿ ಪ್ರಕಟಿಸಿದ್ದಾರೆ.

ನಾವು ಜನರ ಆಶಯಗಳಿಗೆ ವಿರುದ್ಧವಾಗಿ ಹೋಗಿಲ್ಲ.ಆದರೆ ವಿಧಾನಸಭಾಧ್ಯಕ್ಷರು ರಾಜಕೀಯ ಪ್ರೇರಿತರಾಗಿ ತಮ್ಮನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸುವ ತೀರ್ಮಾನ ಕೈಗೊಂಡಿದ್ದಾರೆ ಎಂದು ಅವರು ದೂರಿದರು.

ಹೀಗಾಗಿಯೇ ನಾವು ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವುದಾಗಿ ನುಡಿದ ಅವರು, ಹೈಕೋರ್ಟಿನ ತೀರ್ಪಿಗೆ ಸಂಬಂಧಿಸಿದ ಆದೇಶದ ಪ್ರತಿ ಲಭ್ಯವಾದ ನಂತರ ಮುಂದಿನ ಹೆಜ್ಜೆ ಇಡುವುದಾಗಿ ನುಡಿದರು.

ಈ ಮಧ್ಯೆ ಐವರು ಪಕ್ಷೇತರ ಶಾಸಕರ ಅನರ್ಹತೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಅವರ ತೀರ್ಪನ್ನು ಎತ್ತಿ ಹಿಡಿದು ಉಚ್ಚ ನ್ಯಾಯಾಲಯ ನೀಡಿರುವ ತೀರ್ಪನ್ನು ಮುಖ್ಯಮಂತ್ರಿ,ಬಿಜೆಪಿ ರಾಜ್ಯಾಧ್ಯಕ್ಷ ಕೆ.ಎಸ್. ಈಶ್ವರಪ್ಪ ಸ್ವಾಗತಿಸಿದ್ದಾರೆ.

ಜನರ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಂಡವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿದ ಕ್ರಮವನ್ನು ಎತ್ತಿ ಹಿಡಿದ ಹೈಕೋರ್ಟ್ ಆ ಮೂಲಕ ನ್ಯಾಯವನ್ನು ಎತ್ತಿ ಹಿಡಿದಿದೆ ಎಂದು ಈ ನಾಯಕರು ಹೇಳಿದ್ದಾರೆ.



## ಡಿಪ್ಲೋಮಾ ಕೋರ್ಸನ್ನು ಪದವಿ ಎಂದು ಪರಿಗಣಿಸಲು ಆಗ್ರಹಿಸಿ ಪ್ರತಿಭಟನೆ

ದಾವಣಗೆರೆ, ಫೆ. 14- ಡಿಪ್ಲೋಮಾ ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಎನ್.ಎಸ್.ಯು.ಐ. ನೇತೃತ್ವದಲ್ಲಿ ಡಿಪ್ಲೋಮಾ ವಿದ್ಯಾರ್ಥಿಗಳು ಇಂದು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಂತರ ಜಿಲ್ಲಾಧಿಕಾರಿಗಳ ಕಛೇರಿಗೆ ಆಗಮಿಸಿ ಮನವಿ ಸಲ್ಲಿಸಿದರು. ಮನವಿಯಲ್ಲಿ ಡಿಪ್ಲೋಮಾವನ್ನು ಪದವಿ ಎಂದು ಪರಿಗಣಿಸಬೇಕು. ಪದವೀಧರ ಕ್ಷೇತ್ರದ ಚುನಾವಣೆಯಿಂದ ವಂಚಿತರಾಗಿರುವ ಡಿಪ್ಲೋಮಾ ಪದವೀಧರ ವಿದ್ಯಾರ್ಥಿಗಳನ್ನು ಪದವೀಧರ ಚುನಾವಣೆಯಲ್ಲಿ ಮತದಾನ ಮಾಡಲು ಅವಕಾಶ ಕಲ್ಪಿಸಬೇಕು.

ಕನ್ನಡ ಐಚ್ಛಿಕ ವಿಷಯವನ್ನಾಗಿ ಸೇರ್ಪಡೆ ಮಾಡಬೇಕು. ಜ್ಯೂನಿಯರ್ ಇಂಜಿನಿಯರ್ ಕಾಲೇಜ್ ಎಂದು ಪರಿಗಣಿಸಬೇಕು ಎಂಬ ಬೇಡಿಕೆಗಳನ್ನು ಸರ್ಕಾರ ಈಡೇರಿಸುವಂತೆ ವಿದ್ಯಾರ್ಥಿಗಳು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎನ್.ಎಸ್.ಯು.ಐ. ಜಿಲ್ಲಾ ಘಟಕದ ಅಧ್ಯಕ್ಷ ಕೆ.ವಿ. ಪ್ರಮೋದ್, ಪಿ.ಜಿ. ಸುಬ್ರಮಣ್ಯ, ಎಸ್.ಎಸ್. ಪ್ರಜ್ವಲ್, ಜಿ.ಆರ್. ರಾಘವೇಂದ್ರ, ರವಿಕಿರಣ್, ಪ್ರದೀಪ್, ಅಭಿಷೇಕ್, ಇಮ್ರಾನ್ ಮತ್ತಿತರರು ಭಾಗವಹಿಸಿದ್ದರು.

## ಮಕ್ಕಳು ಮನೆಯ ವಾತಾವರಣದಲ್ಲಿ ಜಾತ್ಯತೀತರಾಗಿ ಬೆಳೆಯಬೇಕು

(1ನೇ ಪುಟದಿಂದ)

ಅಭಿಪ್ರಾಯಪಟ್ಟರು.

ಇಲ್ಲಿನ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಐದನೇ ದಿನದ ಕಾರ್ಯಕ್ರಮದಲ್ಲಿ 'ಜಾತ್ಯತೀತತೆ ಮತ್ತು ಮಾನವೀಯತೆ' ಕುರಿತು ಮಾತನಾಡಿದ ನಟರಾಜ್ ಎಲ್ಲ ವರ್ಗಗಳ ಸೇರ್ಪಡೆಯಿಂದ ಜಾತಿ ಪದ್ಧತಿ ವಿರುದ್ಧ ಚಳುವಳಿ ಆರಂಭವಾಯಿತು. ಅಂದಿನಿಂದಲೂ ಆ ಚಳುವಳಿ ನಡೆದೇ ಇದೆ. 20ನೇ ಶತಮಾನದಲ್ಲಿ ಡಾ|| ಬಿ.ಆರ್. ಅಂಬೇಡ್ಕರ ಸಹ ಅದನ್ನೇ ಪ್ರತಿಪಾದಿಸಿದರು. ಇಲ್ಲಿ ಜಾತ್ಯತೀತ ನಾಯಕನ ಹುಟ್ಟು ಗಮನಾರ್ಹವಾದುದು. ಧರ್ಮ ನಿರಪೇಕ್ಷತೆ ಜನರನ್ನು ಮುನ್ನಡೆಸುವ ಶಕ್ತಿಯಾಗಿದೆ ಎಂದು ನಟರಾಜ್ ಪ್ರತಿಪಾದಿಸಿದರು.

ಕನ್ನಡ ಸಂಸ್ಕೃತಿಯಲ್ಲಿನ ಜಾತ್ಯತೀತತೆ ತತ್ವವನ್ನು ದಾರಿ ತಪ್ಪಿಸುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ ಎಂದು ಹೇಳಿದ ಅವರು, ಜಾತಿಯಿಂದಷ್ಟೇ ಅಲ್ಲದೆ, ಭಾಷೆಯಿಂದಲೂ ಅಸ್ಪೃಶ್ಯತೆಯನ್ನು ನಗರ ಪ್ರದೇಶಗಳಲ್ಲಿ ಕಾಣುತ್ತಿದ್ದೇವೆ. ಆದರೆ, ಧಾರ್ಮಿಕ ಸಂಸ್ಥೆಗಳಲ್ಲಿ ಇಂತಹ ಪ್ರವೃತ್ತಿ ಕಂಡು ಬರುವುದಿಲ್ಲ. ಮನೆಯ ವಾತಾವರಣದಲ್ಲೇ ಮಕ್ಕಳು ಜಾತ್ಯತೀತರಾಗಿ ಬೆಳೆಯುವಂತಾಗಬೇಕು. ಈ ಅಂಶವನ್ನು ಪ್ರತಿಯೊಂದು ಕುಟುಂಬದ ತಾಯಂದಿರು ಮನಗಾಣಬೇಕು ಎಂದು ಅವರು ಕಿವಿಮಾತು ಹೇಳಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಶಾಸಕ ವಿರೂಪಾಕ್ಷಪ್ಪ ಮಾಡಾಳು ಮಾತನಾಡಿ, ಇಂದು ನಾವು ಸಮಾಜವಾದ, ಸಮಾನತೆ ಬಗ್ಗೆ ಮಾತನಾಡುತ್ತೇವೆ. ಆದರೆ, ರೂಢಿಗೆ ತರುತ್ತಿಲ್ಲ. ಆದರೆ 12ನೇ ಶತಮಾನದಲ್ಲಿ ಶರಣರು ಸಮಾಜವಾದದ ಪರವಾಗಿ ನಿಂತರು.

ಅಂದು ಕಾಯಕವೇ ಕೈಲಾಸ ಎಂಬುದು ಧ್ಯೇಯ ವಾಕ್ಯವಾಗಿದ್ದರೆ, ಇಂದು ದುಡಿಯುದೇ ಗಳಿಕೆಯ ಹಾದಿ ತುಳಿಯುತ್ತಿ ರುವುದನ್ನು ಕಾಣುತ್ತಿದ್ದೇವೆ ಎಂದವರು ಹೇಳಿದರು.

ತರಳಬಾಳು ಸಂಸ್ಥೆಯ ವಿದ್ಯಾರ್ಥಿಗಳಲ್ಲಿ ಸರ್ವಧರ್ಮ ಸಮನ್ವಯತೆ ಪಾಲಿಸಿಕೊಂಡು ಬರುತ್ತಿರುವುದು ಹಾಗೂ ಶ್ರೀಗಳ ನೇತೃತ್ವದಲ್ಲಿ ಸರ್ವ ಧರ್ಮಗಳೊಂದಿಗೆ ಭಾವೈಕ್ಯತೆಯನ್ನು ಸಮಾಜದಲ್ಲಿ ಮೂಡಿಸುತ್ತಿರುವುದು ಗಮನಾರ್ಹ ಸಂಗತಿ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಧರ್ಮ ಹಾಗೂ ಜಾತಿಗಳು ದೊಡ್ಡವು ಎಂಬ ಏಣಿ ಏರಿದ್ದೇವೆ. ಇಂತಹ ಭಾವನೆಯಿಂದ ಭಾವೈಕ್ಯತೆಯನ್ನೇ ಮರೆಯುತ್ತಿದ್ದೇವೆ. ಒಬ್ಬ ಭಗವಂತನನ್ನು ಹಲವೆಡೆ ಹಂಚಿ ಸಂಕುಚಿತ ಸ್ಥಿತಿ ತಲುಪಿದ್ದೇವೆ. ಹಿಂದೂ, ಜೈನ, ಸಿಖ್, ಕ್ರೈಸ್ತ ಧರ್ಮಗಳಿಗಿಂತ ಮಿಗಿಲಾದದ್ದು ಇದನ್ನು ಅರ್ಥ ಮಾಡಿಕೊಂಡಾಗ ಮಾತ್ರ ಭಾವೈಕ್ಯತೆ ಸಾಕಾರಗೊಳ್ಳುತ್ತದೆ ಎಂದು ವಿಧಾನ ಪರಿಷತ್ ವಿಶ್ರಾಂತ ಸದಸ್ಯ ಡಾ. ಏಜಾಸುದ್ದೀನ್ ಹೇಳಿದರು.

## ಗರ್ಭದಿಂದ ಗೋರಿಯವರೆಗೂ ಪ್ರತಿಯೊಬ್ಬರಿಗೆ ಕಾನೂನಿನ ಅರಿವು ಅಗತ್ಯ



ಹೂವಿನಹಡಗಲಿ, ಫೆ.13- ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ದೇಶ ನಮ್ಮದಾಗಿದ್ದು, ಹಿಂದೂ ಅಧಿನಿಯಮದ ಪ್ರಕಾರ ಒಬ್ಬ ಗರ್ಭಿಣಿ ಮಹಿಳೆಯು ಮೂರು ತಿಂಗಳು ಮಗು ಭ್ರೂಣವಾಗಿದ್ದಾಗಲೇ ತಂದೆಯ ಆಸ್ತಿಗೆ ಹಕ್ಕುದಾರನಾಗುತ್ತದೆ. ಒಂದು ವೇಳೆ ಹೆಣ್ಣು ಗರ್ಭವತಿಯಾಗಿದ್ದಾಗ ಗಂಡ ತೀರಿಕೊಂಡರೆ, ಗರ್ಭದಲ್ಲಿರುವ ಮಗುವೂ ಕೂಡಾ ತಂದೆಯ ಆಸ್ತಿಯಲ್ಲಿ ಹಕ್ಕು ಪಡೆಯಲು ಕಾನೂನಿನಲ್ಲಿ ಅವಕಾಶವಿದೆ. ಗರ್ಭದಿಂದ ಗೋರಿಯವರೆಗೂ ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಅವಶ್ಯ ಎಂದು ಹಡಗಲಿಯ ಸಿವಿಲ್ ನ್ಯಾಯಾಧೀಶರಾದ ರಮಾಕಾಂತ್ ಚೌವ್ಹಾಣ್ ಅಭಿಪ್ರಾಯಪಟ್ಟರು.

ಅವರು ತಾ.ಪಂ. ಮಲ್ಲಿಗೆ ಸಭಾಂಗಣದಲ್ಲಿ ಹಡಗಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ತಾಲ್ಲೂಕು ನ್ಯಾಯವಾದಿಗಳ ಸಂಘ, ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗಾಗಿ ಹಮ್ಮಿಕೊಂಡಿದ್ದ ಒಂದು ದಿನದ ಕಾನೂನು ಅರಿವು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಯಾವುದೇ ವ್ಯಕ್ತಿಯ ಜೀವನ ನಿರ್ಮಾಣದ ಶಿಲ್ಪಿಗಳು ಶಿಕ್ಷಕರಾಗಿದ್ದು, ಯಾವುದೇ ಒಬ್ಬ ವ್ಯಕ್ತಿ ಉನ್ನತ ಸ್ಥಾನಕ್ಕೇರಲು ಹೆಣ್ಣು, ಗುರು ಮತ್ತು ಪ್ರಯತ್ನ ಮಹತ್ವದ ಪಾತ್ರ ನಿರ್ವಹಿಸುತ್ತವೆ ಎಂದ ಅವರು, ರಾಷ್ಟ್ರದಲ್ಲಿ ಬೇರೆ ಬೇರೆ ವಿಧದ ಕಾನೂನುಗಳಿದ್ದು, ಇದರಲ್ಲಿ ನೆಲದ ಕಾನೂನು ಎಲ್ಲರಿಗೂ ಅಗತ್ಯವಾಗಿದ್ದು, ಇದನ್ನು ಪ್ರತಿಯೊಬ್ಬ ಪ್ರಜೆಯೂ

**ನ್ಯಾ|| ರಮಾಕಾಂತ್ ಚೌವ್ಹಾಣ್**

ಅರಿತು ಕೊಳ್ಳಬೇಕಾಗಿದೆ, ಕಾನೂನನ್ನು ಮುರಿಯುವ ಬಗ್ಗೆ ಯೋಚಿಸದೇ ಕಾನೂನಿನ ಪರಿಪಾಲನೆಯ ಬಗ್ಗೆ ಯೋಚಿಸುವುದು ಸೂಕ್ತ ನಿರ್ಧಾರವಾಗಿದೆ ಎಂದರು.

ಮಹಿಳೆಯರಿಗೆ ಸಮಾನ ಹಕ್ಕು ನೀಡಲು 1994ರಲ್ಲಿ ಕಾನೂನು ಜಾರಿಗೆ ಬಂದಿದ್ದು, ದುರ್ಬಲರ ರಕ್ಷಣೆ ಕಾನೂನು ಸೇವೆಗಳ ಸಮಿತಿಯ ದೀಕ್ಷೆಯಾಗಿದ್ದು, ಮದುವೆಯಾದ ಮಹಿಳೆಯರಿಗೂ ತಂದೆಯ ಆಸ್ತಿಯಲ್ಲಿ ಪಾಲು ಇದೆ ಎಂದು ತಿಳಿಸಿ, 2005ರಲ್ಲಿ ಕೇಂದ್ರ ಸರ್ಕಾರ ಈ ಕಾನೂನನ್ನು ಜಾರಿಗೊಳಿಸಿದೆ. ಕಾನೂನಿನ ದುರ್ಬಳಕೆ ತಪ್ಪಬೇಕೆಂದು ತಿಳಿಸಿ, ಗ್ರಾಮೀಣ ಮಟ್ಟದಲ್ಲಿ ಪ್ರಥಮ ಚಿಕಿತ್ಸೆಯ ಮಾದರಿಯಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಜಾರಿಗೆ ತಂದಿದೆ. ಈ ಮೂಲಕ ನ್ಯಾಯವಾದಿಗಳಾದ ಡಿ. ಸಿದ್ದನಗೌಡ ಹಾಗೂ ಬಿ.ಎಂ.ಮಂಜುಳ ಇಬ್ಬರೂ ವಕೀಲರನ್ನು ಈಗಾಗಲೇ ನೇಮಿಸಿದ್ದು, ಗ್ರಾಮೀಣ ಭಾಗದ ಜನತೆ ಆಯಾ ವ್ಯಾಪ್ತಿಯಲ್ಲಿ ಅರ್ಜಿ ಸಲ್ಲಿಸಿ, ಸಾರ್ವಜನಿಕರು ಕಾನೂನಿನ ಸದುಪಯೋಗ ಪಡೆಯಲು ಸೂಚಿಸಿದರು.

ತಾಲ್ಲೂಕು ಕಾನೂನು ಸೇವಾ ಸಮಿತಿಯಿಂದ ಕಾನೂನಿನ ಅರಿವು, ಲೋಕ ಅದಾಲತ್ ಮತ್ತು ಕಾನೂನಿನ ನೆರವು ಇದ್ದು, ಸಣ್ಣ ಕಾರಣಕ್ಕಾಗಿ ನ್ಯಾಯಾಲಯದ ಮೆಟ್ಟಿಲು ಹತ್ತದೇ, ಲೋಕ ಅದಾಲತ್ ಮೂಲಕ ಲಘು ವ್ಯಾಜ್ಯ ಪರಿಹಾರ ಕಾನೂನಿನ ನೆರವು ಪಡೆದುಕೊಳ್ಳಬೇಕೆಂದ ಅವರು, ಯಾವುದೇ ಪ್ರಕರಣಗಳು ಮೊದಲು ರಾಜೀಯಾಗಬೇಕು, ನ್ಯಾಯಾಧೀಶರು ಮಾಡಿದ ಕಾನೂನು ಎಲ್ಲಾ ರೀತಿಯಲ್ಲಿ ಅನ್ವಯ ವಾಗುತ್ತವೆ. ಈ ನಿಟ್ಟಿನಲ್ಲಿ ಕಾನೂನನ್ನು ಗೌರವಿಸಿ, ಎಲ್ಲಾ ರಿತಿಯ ಪರಿಹಾರ ಮತ್ತು ನೆರವು ಕಂಡುಕೊಳ್ಳಲು ಕರೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪಾರಿ ಬಸವರಾಜ್ ಮಾತನಾಡಿದರು, ಇದೇ ಸಂದರ್ಭದಲ್ಲಿ ವಕೀಲರಾದ ಅಟವಾಳಗಿ ಕೊಟ್ರೇಶ್, ಎಂ.ಗಂಗಾಧರ, ಎಲ್. ಶಿವಕುಮಾರನಾಯ್ಕ, ಶಿವಲಿಂಗಪ್ಪ ಸೂರಣಗಿ, ಜೆ.ಎಸ್.ಎಸ್.ನ ಪ್ರಾಂಶುಪಾಲರಾದ ಎಂ.ಪಿ.ಎಂ. ಮಂಜುನಾಥ, ಸರ್ಕಾರಿ ಅಭಿಯೋಜಕ ಜಗದೀಶ ಬಿಸೆರೊಟ್ಟಿ ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಕೀಲರ ಸಂಘದ ಅಧ್ಯಕ್ಷ ಐ.ಚಿದಾನಂದ ವಹಿಸಿದ್ದರು. ಎಸ್. ಹೆಚ್.ಛಬ್ಬಿ, ಜಿ.ಎ.ಹಿರೇಮಠ, ಸುಧಾಕರ ಶ್ಯಾನುಬೋಗ ಉಪಸ್ಥಿತರಿದ್ದರು. ವಿ.ಷಣ್ಮುಖನಗೌಡ ಕಾರ್ಯಕ್ರಮ ನಿರೂಪಿಸಿದರು.

## ಸತ್ಕಾರ್ಯ ಮಾಡಿದವರನ್ನು ಮಾತ್ರ ಜಗತ್ತು ಸಾಧಕರೆನ್ನುತ್ತದೆ : ಮುರುಘಾ ಶರಣರು




ದಾವಣಗೆರೆ, ಫೆ. 14- ಕೆಟ್ಟ ಕೆಲಸಕ್ಕೆ ಪ್ರೋತ್ಸಾಹ, ಬೆಂಬಲ ಬೇಗ ಸಿಗುತ್ತದೆ. ಅದೇ ಒಳ್ಳೆಯ ಕೆಲಸಕ್ಕೆ ಬೆಂಬಲವಾಗಲಿ, ಪ್ರೋತ್ಸಾಹವಾಗಲಿ ಸಿಗುವುದು ಕಷ್ಟ. ಸತ್ಕಾರ್ಯ ಮಾಡಿದವರನ್ನು ಮಾತ್ರ ಜಗತ್ತು ಸಾಧಕರೆನ್ನುತ್ತದೆ ಎಂಬ ವಾಸ್ತವ ಸಂಗತಿಯನ್ನು ನಾವ್ಯಾರೂ ಮರೆಯಬಾರದು ಎಂದು ಚಿತ್ರದುರ್ಗ ಬೃಹನ್ಮಠದ ಡಾ. ಶಿವಮೂರ್ತಿ ಮುರುಘರಾಜೇಂದ್ರ ಶರಣರು ಹೇಳಿದರು.

ನೇತ್ರದಾನ, ರಕ್ತದಾನ ಹಾಗೂ ಪರಿಸರ ಸಂರಕ್ಷಣೆ ಅರಿವು ಮೂಡಿಸುವ ಉದ್ದೇಶದೊಂದಿಗೆ ನಗರದಲ್ಲಿ ಅಸ್ತಿತ್ವಕ್ಕೆ ಬಂದಿರುವ ಜನಸ್ಪಂದನ ಸಮಿತಿಯನ್ನು ಉದ್ಘಾಟಿಸಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಿ ಮಾತನಾಡಿದ ಅವರು, ಒಳ್ಳೆ ಕೆಲಸಕ್ಕೆ ಬೆಂಬಲ ಹಾಗೂ ಪ್ರೋತ್ಸಾಹ ಸಿಗುವುದು ಕಷ್ಟ. ಮೊದಲು ಇಂತಹ ವಾತಾವರಣಕ್ಕೆ ಬದಲಾಗಬೇಕು ಎಂದರು.

ಸಾಧಕರು ಎಂಬುದಾಗಿ ಕರೆಯುವುದು ಸದುದ್ದೇಶಕ್ಕಾಗಿ ಹೋರಾಡಿದವರನ್ನು ಮಾತ್ರ. ಭೂಮಿಯ ಮೇಲೆ ಹುಟ್ಟಿರುವ ನಾವೆಲ್ಲರೂ ಒಂದಲ್ಲಾ ಒಂದು ಕಾರಣವನ್ನಿಟ್ಟುಕೊಂಡು ಬದುಕುತ್ತೇವೆ. ಮನುಷ್ಯ ಮಾತ್ರವಲ್ಲದೆ, ಸಕಲ ಚರಾಚರಗಳು ಬದುಕುತ್ತವೆ. ಪ್ರಾಣಿ ಪಕ್ಷಿಗಳಿಗೆ ಸಾಧನೆ ಎಂಬುದು ಇರುವುದಿಲ್ಲ. ಕೇವಲ ಹುಟ್ಟಿ ಸಂತಾನ ಬೆಳೆಸಿ ಸಾಯುವುದು ಒಂದೇ ಗುರಿಯಾಗಿರುತ್ತದೆ ಎಂದರು.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸಮ್ಮುಖ ವಹಿಸಿದ್ದರು. ನಗರಪಾಲಿಕೆ ಮಹಾಪೌರ ಎಂ.ಜಿ. ಬಕ್ಕೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಬಿ. ಲೋಕೇಶ್, ಸದಸ್ಯ ಶಿವನಹಳ್ಳಿ ರಮೇಶ್, ಆಯುಕ್ತ ಹೆಚ್.ಎಸ್. ಪ್ರಸನ್ನಕುಮಾರ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಜನಸ್ಪಂದನ ಸಂಘದ ಸಂಸ್ಥಾಪಕ ನಾಗೇಂದ್ರ ಬಂಡೀಕರ್, ಅಧ್ಯಕ್ಷ ಸುಬೋಧ್ ಎನ್. ಬಂಡೀಕಾರ್, ನಾಗಭೂಷಣ ತೌಡೂರು, ಎಂ. ನಾಗರಾಜ್, ಬಿ.ಆರ್. ವಿಶ್ವನಾಥ್ ಅವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರಾದ ಡಾ. ಸಲಾವುದ್ದೀನ್, ಟಿ. ಸೋಮಶೇಖರ್, ಬುಳಸಾಗರದ ಸಿದ್ದರಾಮಪ್ಪ, ಪಾರ್ಶ್ವನಾಥ್, ಡಿ. ಎಸ್. ಜಯಂತ್, ಪ್ರೇಮಾ, ಓ.ಎಸ್. ಖುದ್ದೂಸ್, ಶ್ರೀಮತಿ ಲತಿಕಾ ದಿನೇಶ್ ಶೆಟ್ಟಿ, ವೈ. ಮಲ್ಲೇಶ್ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ನಗರದ ಶ್ರೀ ಶಿವಯೋಗ ಮಂದಿರದಲ್ಲಿ ಮೊನ್ನೆ ಈ ಕಾರ್ಯಕ್ರಮ ಏರ್ಪಾಡಾಗಿತ್ತು.

## ಷೇರು ಪೇಟೆಯಲ್ಲಿ ಚೇತರಿಕೆ

ಮುಂಬೈ, ಫೆ. 14 - ಹಣದುಬ್ಬರ ತಗ್ಗಿರುವುದು ಹಾಗೂ ಈಜಿಪ್ಟಿನಲ್ಲಿ ಆಗಿರುವ ಉತ್ತಮ ಬೆಳವಣಿಗೆಗಳ ಕಾರಣದಿಂದಾಗಿ ಮುಂಬೈ ಷೇರು ಪೇಟೆ 473 ಅಂಕಗಳ ಪುಟಿತ ಕಂಡಿದ್ದು 18,202.20ಗೆ ತಲುಪಿದೆ. ನಾಲ್ಕು ತಿಂಗಳಲ್ಲಿ ಕಂಡು ಬಂದ ಅತಿ ಹೆಚ್ಚಿನ ಏರಿಕೆ ಇದಾಗಿದೆ.

ಇತ್ತೀಚೆಗೆ ಮಾರುಕಟ್ಟೆಯಲ್ಲಿ ಉಂಟಾದ ಕುಸಿತದ ಬಗ್ಗೆ ತನಿಖೆ ನಡೆಸಲು ಸೆಬಿ ಮುಂದಾಗಿರುವುದು ಹಾಗೂ ಜಾಗತಿಕವಾಗಿ ಆದ ಬದಲಾವಣೆಗಳು ಹೂಡಿಕೆದಾರರ ಉತ್ಸಾಹ ಹೆಚ್ಚಿಸಿವೆ.

## ಸೌರ ವಿದ್ಯುತ್ ಅಳವಡಿಸಿದ ಹೊಸ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ

(1ನೇ ಪುಟದಿಂದ)

ಮುನ್ನೂರು ಮೆಗಾವ್ಯಾಟ್ ವಿದ್ಯುತ್ ಖರೀದಿಸುತ್ತಿದ್ದು, ಪರಿಸ್ಥಿತಿಯನ್ನು ನಿಭಾಯಿಸುವ ಸಾಮರ್ಥ್ಯವಿದೆ.

ರಾಯಚೂರು ವಿದ್ಯುತ್ ಸ್ಥಾವರದ ಎಂಟನೇ ಘಟಕ, ಯುಪಿಸಿಎಲ್ ಹಾಗೂ ಶರಾವತಿ ವಿದ್ಯುತ್ ಸ್ಥಾವರದ ಐದನೇ ಘಟಕಗಳ ದುರಸ್ತಿ ಕಾಮಗಾರಿ ಪೂರ್ಣಗೊಂಡರೆ, ಕನಿಷ್ಠ ಐನೂರು ಮೆಗಾವ್ಯಾಟ್ ವಿದ್ಯುತ್ ಹೆಚ್ಚುವರಿಯಾಗಿ ಲಭ್ಯವಾಗಲಿದೆ.

ಪ್ರಸಕ್ತ ವರ್ಷದಲ್ಲಿ ಬಳ್ಳಾರಿಯ ಎರಡನೇ ಘಟಕ ಹಾಗೂ ಉಡುಪಿಯ ಎರಡನೇ ಘಟಕದಿಂದ ಸುಮಾರು ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ನಮಗೆ ಲಭ್ಯವಾಗಲಿದೆ.

ಬಳ್ಳಾರಿಯ ಮೂರನೇ ಘಟಕದ ಸ್ಥಾಪನೆಗಾಗಿ ಬಿಹೆಚ್‌ಇಎಲ್ ಜತೆ ಸರ್ಕಾರ ಈಗಾಗಲೇ ಒಪ್ಪಂದ ಮಾಡಿಕೊಂಡಿದ್ದು, ಇದಕ್ಕಾಗಿ ನೂರಾಎಂಭತ್ತು ಕೋಟಿ ರೂ.ಗಳನ್ನು ನೀಡಲಾಗಿದೆ. ಈ ಘಟಕದಿಂದ 2014 ನೇ ಇಸವಿಯ ವೇಳೆಗೆ ವಿದ್ಯುತ್ ಲಭ್ಯವಾಗಲಿದೆ.

ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದಲ್ಲಿರುವ ಎಲ್ಲಾ ಮನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ತೀರ್ಮಾನಿಸಲಾಗಿದೆ. ಒಂದು ಲಕ್ಷ ಮನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸಬೇಕಿದೆ ಎಂದರು.

ರಾಜ್ಯದ ಯಡ್ಲಾಪುರ, ಗುಲ್ಬರ್ಗ, ಯರಮರಸು ಹಾಗೂ ಛತ್ತೀಸ್‌ಘಡದ ಜತೆ ಒಪ್ಪಂದ ಮಾಡಿಕೊಂಡ ಒಪ್ಪಂದದ ಹಿನ್ನೆಲೆಯಲ್ಲಿ ಗೋದ್ನಾದಲ್ಲಿ ಸ್ಥಾಪಿಸಲಾಗುತ್ತಿರುವ ಘಟಕಕ್ಕೆ ಕೇಂದ್ರ ಸರ್ಕಾರ ಇನ್ನೂ ಕಲ್ಲಿದ್ದಲು ಮಂಜೂರು ಮಾಡಿಲ್ಲ ಎಂದು ಸಚಿವೆ ಕರಂದ್ಲಾಜೆ ಹೇಳಿದರು.

## ನಂದಿನಿ ಹಾಲಿನ ದರ 2 ರೂ. ಹೆಚ್ಚಳ

(1ನೇ ಪುಟದಿಂದ)

ತಡೆಹಿಡಿಯಲಾಗಿದೆ.

ಇದೇ ರೀತಿ ಮುಂದುವರೆದರೆ ರಾಜ್ಯದ ಗ್ರಾಹಕರಿಗೆ ಹಾಲು ಒದಗಿಸುವುದು ಕಷ್ಟವಾಗುತ್ತಿತ್ತು. ಕಳೆದ ಡಿಸೆಂಬರ್ ಅಂತ್ಯಕ್ಕೆ 38 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿತ್ತು. ಆದರೆ, ಇತ್ತೀಚೆಗೆ 33.5 ಲಕ್ಷ ಲೀಟರ್‌ಗೆ ಇಳಿದಿತ್ತು.

ಇದರಲ್ಲಿ 29 ಲಕ್ಷ ಲೀಟರ್ ಹಾಲನ್ನು ಗ್ರಾಹಕರಿಗೆ ನೀಡಿ, ಉಳಿದ ಹಾಲನ್ನು ಮೊಸರು ಮತ್ತು ಗುಡ್ ಲೈಫ್ ಹಾಲಿಗೆ ಬಳಸಲಾಗುತ್ತಿತ್ತು. ಆದರೂ ಒಂದು ಲಕ್ಷ ಲೀಟರ್ ಹಾಲಿನ ಕೊರತೆ ಉಂಟಾಗುತ್ತಿತ್ತು.

ದರ ಏರಿಕೆಯಿಂದ ಹಾಲಿನ ಪೂರೈಕೆ ಹೆಚ್ಚಾಗಲಿದ್ದು, ಗ್ರಾಹಕರ ಬೇಡಿಕೆ ಈಡೇರಿಸಬಹುದು. ಮಂಗಳೂರು, ಗುಲ್ಬರ್ಗ ಸೇರಿದಂತೆ ಕೆಲವು ಒಕ್ಕೂಟಗಳಲ್ಲಿ ಮೂರು ರೂಪಾಯಿ ಹೆಚ್ಚಳವಾಗಲಿದೆ.

ಹಾಲಿನ ದರವನ್ನು ಪ್ರತಿ ಲೀಟರ್‌ಗೆ ಕನಿಷ್ಠ 3ರೂ.ನಂತೆ ಏರಿಕೆ ಮಾಡಲು ಅನುಮತಿ ಕೋರಿ ಕೆಎಂಎಫ್ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.

## ಹುಲಿಗುಡ್ಡ ಏತನೀರಾವರಿ ಕಛೇರಿಗಳ ಸ್ಥಳಾಂತರಕ್ಕೆ ತಡೆ

(1ನೇ ಪುಟದಿಂದ)

ಬಹುಮುಖ್ಯವಾಗಿ ಇಲ್ಲಿಗೆ ಅಗತ್ಯವಿದ್ದ ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಛೇರಿಯನ್ನು ಗದಗನಲ್ಲಿಯೇ ಮುಂದುವರೆಸಿರುವುದು ಎಂ.ಪಿ.ಪ್ರಕಾಶ್ ಅಭಿಮಾನಿಗಳ ಅಸಮಾಧಾನಕ್ಕೆ ಕಾರಣವಾಗಿದೆ. ಅದನ್ನೂ ಸಹ ಶಾಸಕ ಚಂದ್ರನಾಯ್ಕರು ಹಡಗಲಿಗೆ ವಾಪಸ್ ತಂದರೆ ಮಾತ್ರ ಅವರು ಕೊಟ್ಟ ಮಾತನ್ನು ಉಳಿಸಿಕೊಂಡಂತಾಗುತ್ತದೆ ಎಂಬ ಇಂಗಿತ ವ್ಯಕ್ತಪಡಿಸಿದ್ದಾರೆ.

ಶಿವಮೊಗ್ಗ ಪ್ರವಾಸದಲ್ಲಿದ್ದ ಶಾಸಕ ಚಂದ್ರನಾಯ್ಕ ಪತ್ರಿಕೆಯೊಂದಿಗೆ ಮಾತನಾಡಿ, ಹಡಗಲಿಯಿಂದ ಯಾವುದೇ ಕಛೇರಿಗಳನ್ನು ಬೇರೆಡೆಗೆ ಸ್ಥಳಾಂತರಿಸುವ ಉದ್ದೇಶ ತಮಗಿಲ್ಲ, ಅನಗತ್ಯವಾಗಿ ಕ್ಷೇತ್ರದ ಜನತೆ ಗೊಂದಲಕ್ಕೆ ಒಳಗಾಗಬಾರದು. ಇನ್ನೂ ನನ್ನ ಅಧಿಕಾರದ ಅವಧಿ ಇರುವವರೆಗೂ ಅಭಿವೃದ್ದಿ ಕಾರ್ಯಕ್ರಮಗಳನ್ನು ಮಂಜೂರು ಮಾಡಿಸಿಕೊಂಡು ಬರುತ್ತೇನೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

## ಸೂರಗೊಂಡನಕೊಪ್ಪದಲ್ಲಿ ಇಂದಿನ ಸೇವಾಲಾಲ್ ಜಯಂತ್ಯೋತ್ಸವಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ

(1ನೇ ಪುಟದಿಂದ)

ಶಾಸಕರೂ ಆದ ರಾಜ್ಯ ಬಂಜಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಬಸವರಾಜನಾಯ್ಕ ಅಧ್ಯಕ್ಷತೆ ವಹಿಸುವರು, ಅಬಕಾರಿ ಸಚಿವ ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ಅಧ್ಯಕ್ಷ ಕೆ.ಎಸ್. ಈಶ್ವರಪ್ಪ, ಸಂಸದ ಅನಂತ ಕುಮಾರ್, ತೋಟಗಾರಿಕೆ ಸಚಿವ ಎಸ್.ಎ ರವೀಂದ್ರನಾಥ್, ಪಶುಸಂಗೋಪನಾ ಸಚಿವ ರೇವುನಾಯ್ಕ್ ಬೆಳಮಗಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

**ತಜ್ಞ ವೈದ್ಯರ ಸಲಹೆ**

**ಸ್ಥೂಲಕಾಯ (Obesity) ತೊಂದರೆಯಿಂದ ಬಳಲುತ್ತಿರುವವರಿಗೆ ಕೇರಳೀಯ ಆಯುರ್ವೇದ ಚಿಕಿತ್ಸಾ ಕ್ರಮಗಳಿಂದ ಸೂಕ್ತ ಸಲಹೆ ಮತ್ತು ಚಿಕಿತ್ಸೆ**

**ಧಾತ್ರಿ ಆಯುರ್ವೇದ ಆಸ್ಪತ್ರೆ**

3ನೇ ಕ್ರಾಸ್, ಎಸ್.ಎಸ್. ಲೇ ಔಟ್ 'ಎ' ಬ್ಲಾಕ್, (ಲಕ್ಷ್ಮೀ ಫ್ಲೋರ್ ಮಿಲ್ ಹಿಂಭಾಗ) ದಾವಣಗೆರೆ. ಫೋನ್ : 08192-224617

**JANATHAVANI,** Regd No. 27369/75, Printed by **H.S.Jayasheela,** at Jayadhara Offset Printers, # 326, Dixit Road, Kastur Ba Extension, Davangere -2. Editor: **H.N.Shadaksharappa.** Owned & Published by **M.S.Vikas,** from # 326, Dixit Road, Kasturba Extension, Davangere-2.